ಕಣಂಜಾರು ಆನಂದ ಶೆಟ್ಟಿ ಸಂಸ್ಮರಣ
ಪ್ರಸಂಗ ಮಾಲಿಕೆ
ಸಂಪುಟ-22



ಪ್ರಕಾಶಕರು
ಎಚ್.ಬಿ.ಎಲ್.ರಾವ್
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
2002

Scanned by CamScanner

ಕಣಂಜಾರು ಆನಂದ ಶೆಟ್ಟಿ ಸಂಸ್ಮರಣ

ಯಕ್ಷಗಾನ ಪ್ರಸಂಗಮಾಲಿಕೆ

ಸಂಪುಟ – 22

(ಏಳು ಪ್ರಸಂಗಗಳು)

ಸಂಪಾದಕರು : ಎಚ್. ಬಿ. ಎಲ್. ರಾವ್
ಸಹಕಾರ : ಪಿ. ಶ್ರೀನಿವಾಸ ಭಟ್, ಕಟೀಲು

ಪ್ರಕಾಶನ
ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ
2002

Scanned by CamScanner

Seven Yakshagana Prasangas written by different authors
Edited by H.B.L. Rao, Mumbai.

First Impression : 2002
Volume : 22
Pages : viii + 208
Price : Rs. 70/-

ಮುಖಪುಟ ವಿನ್ಯಾಸ : ನಾಗರಾಜ ಆಚಾರ್ಯ, ಮಣಿಪಾಲ.
ಅಕ್ಷರಸಂಯೋಜನೆ : ಶ್ರೀಮತಿ ಸ್ವರ್ಣಲತಾ ಕೇಕುಣ್ಣಾಯ,
'ನವದುರ್ಗಾ ಲೇಸರ್‌ಟೆಕ್',
ಕುಂಜಿಬೆಟ್ಟು, ಉಡುಪಿ–576 102.
Printed at : Manipal Press Ltd., Manipal-576 119.
Publisher : Padaveedhara Yakshagana Samiti,
Manushruti, C.42/2/2, Sector-29
Vashi, Navi Mumbai-400 703.

ಸಂಪಾದಕೀಯ

ಹೋಟೆಲು ಉದ್ಯಮಿಯಾಗಿದ್ದ ಕಣಂಜಾರು ಆನಂದ ಶೆಟ್ಟಿಯವರು ಪ್ರವೃತ್ತಿಯಲ್ಲಿ ಬಡಗುತಿಟ್ಟಿನ ಹವ್ಯಾಸಿ ಭಾಗವತರಾಗಿ, ಹಲವಾರು ಯಕ್ಷಗಾನ ಕಲಾವಿದರಿಗೆ ಆಶ್ರಯದಾತರಾಗಿದ್ದರು. ೧೯೫೫ರಲ್ಲಿ ಆನಂದ ಶೆಟ್ಟಿಯವರ ಮುಂದಾಳುತನದಿಂದ ಅಸ್ತಿತ್ವಕ್ಕೆ ಬಂದ, ಸರಸ್ವತೀ ಯಕ್ಷಗಾನ ಮಂಡಳಿಯು ಬಡಗುತಿಟ್ಟಿನ ಏಕಮಾತ್ರ ಮಂಡಳಿಯಾಗಿ ಮುನ್ನಡೆದು ೧೯೬೪ರಲ್ಲಿ ಕೃಷ್ಣಕೃಪಾ ಯಕ್ಷಗಾನ ಮಂಡಳಿಯೆಂಬ ಹೆಸರಿನಿಂದ ಹಲವಾರು ಪ್ರದರ್ಶನಗಳನ್ನು ನೀಡಿತ್ತು. ಮಂಡಳಿಗೆ ಬೇಕಾದ ವೇಷಭೂಷಣಗಳನ್ನು, ಕಲಾವಿದರ ಆವಶ್ಯಕತೆಯನ್ನು ಯಥಾ ಸಾಧ್ಯ ಆನಂದ ಶೆಟ್ಟಿಯವರು ಪೂರೈಸುತ್ತಿದ್ದರು. ಸದ್ದುಗದ್ದಲವಿಲ್ಲದೆ ಯಕ್ಷಗಾನ ಸೇವಾನಿರತರಾಗಿದ್ದ ಕಣಂಜಾರು ಆನಂದ ಶೆಟ್ಟಿಯವರನ್ನು ೧೯೯೮ರಲ್ಲಿ ನಡೆದ ಎಂಟನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸುವ ಅವಕಾಶ ದೊರೆತದ್ದು ಪದವೀಧರ ಯಕ್ಷಗಾನ ಸಮಿತಿಗೆ ಹೆಮ್ಮೆಯ ವಿಷಯ.

ಇಂದು ನಮ್ಮೊಂದಿಗೆ ಇಲ್ಲದ ಆನಂದ ಶೆಟ್ಟಿಯವರ ನೆನಪನ್ನು ನಮ್ಮೆಲ್ಲರ ಮನಸ್ಸಿನಲ್ಲಿ ನೆಲೆಸುವಂತೆ ಮಾಡುವ ಪ್ರಯತ್ನವೇ ಪುಸ್ತಕ ರೂಪದಲ್ಲಿ ಇಪ್ಪತ್ತೆರಡನೆಯ ಸಂಪುಟವಾಗಿ ಏಳು ಅಪೂರ್ವ ಪ್ರಸಂಗಗಳಿಂದ ಕೂಡಿದ 'ಕಣಂಜಾರು ಆನಂದ ಶೆಟ್ಟಿ ಸಂಸ್ಮರಣಾ ಯಕ್ಷಗಾನ ಪ್ರಸಂಗಮಾಲಿಕೆ' ಹಸ್ತಪ್ರತಿಯಾಗಿ ಉಳಿದಿದ್ದ ಪ್ರಸಂಗಗಳನ್ನು ಮುದ್ರಿಸಲು ಅವಕಾಶ ನೀಡಿದ ಕಿರಿಯ ಬಲಿಪ ನಾರಾಯಣ ಭಾಗವತರು, ಶ್ರೀ ಪಿ. ಶ್ರೀನಿವಾಸ ಭಟ್, ಕಟೀಲು ಮತ್ತು ವಿದ್ವಾನ್ ತಾಳ್ತಜೆ ಕೇಶವ ಭಟ್ –ಇವರಿಗೆ ನಾನು ಋಣಿ. ಪ್ರಸಂಗ ಮುದ್ರಣಕ್ಕೆ ಆರ್ಥಿಕ ನೆರವಿತ್ತ ದಿ। ಆನಂದ ಶೆಟ್ಟಿಯವರ ಅಳಿಯ ಶ್ರೀಯುತ ವಿಠಲ ಶೆಟ್ಟಿ ಮತ್ತು ಪರಿವಾರದವರನ್ನು ಮರೆಯುವಂತಿಲ್ಲ. ಎಲೆಮರೆಯ ಕಾಯಿಯಂತೆ ಯಕ್ಷಗಾನ ಸಮ್ಮೇಳನಗಳಿಗೆ ಸಹಕಾರ ನೀಡುತ್ತಾ ಬಂದಿರುವ ಆತ್ಮೀಯ ಯಕ್ಷಗಾನ ಕಲಾವಿದ ಕೆ. ಕೆ. ಶೆಟ್ಟಿಯವರು ನೆನಪಿನಲ್ಲಿಡಬೇಕಾದ ವ್ಯಕ್ತಿ.

ಅಂದವಾಗಿ ಅಕ್ಷರಸಂಯೋಜನೆ ಮಾಡಿದ 'ನವದುರ್ಗಾ ಲೇಸರ್‌ಟೆಕ್'ನ ಶ್ರೀಮತಿ ಸ್ವರ್ಣಲತಾ ಕೇಕುಣ್ಣಾಯ, ಉದಯವಾಣಿಯ ಉಪಸಂಪಾದಕ ಲಕ್ಷ್ಮೀನಾರಾಯಣ ಕುಂಡಂತಾಯ, ಮುಖಪುಟದ ವಿನ್ಯಾಸಕ ನಾಗರಾಜ ಆಚಾರ್ಯ, ಪುಸ್ತಕವನ್ನು ಸುಂದರವಾಗಿ ಮುದ್ರಿಸಲು ಸಹಕರಿಸಿದ ಮಣಿಪಾಲ್ ಪ್ರೆಸ್‌ನ ಆತ್ಮೀಯರಿಗೆಲ್ಲ ನನ್ನ ನಮನ. ಸಂಪುಟಕ್ಕೆ ಅರ್ಥಪೂರ್ಣ ಮುನ್ನುಡಿಯನ್ನು ಬರೆದ ಆತ್ಮೀಯ ಅಜಾರು ನಾಗರಾಜ ರಾಯರು ಮತ್ತು ಇಂದ್ರಕೀಲಕ ಪ್ರಸಂಗದ ಹಸ್ತಪ್ರತಿಯನ್ನು ಒದಗಿಸಿದ ಎಚ್. ಮಹಾದೇವ ಭಟ್ ಹಂಡೇಲು –ಇವರಿಗೆ ಕೃತಜ್ಞತೆಗಳು.

Scanned by CamScanner

ಔಷಧ ಪ್ರಸಂಗದ ಕುರಿತು ವಿದ್ವತ್‌ಪೂರ್ಣ ಪರಿಚಯಲೇಖನ ನೀಡಿದ ಸನ್ಮಿತ್ರ ಡಾ। ತಾಳ್ತಜೆ ವಸಂತ ಕುಮಾರರಿಗೆ ನಾನು ಋಣಿ. ಹತ್ತನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ಇಪ್ಪತ್ತೆರಡನೆಯ ಸಂಪುಟವಾಗಿ ಏಳು ಯಕ್ಷಗಾನ ಪ್ರಸಂಗಗಳನ್ನು ಯಕ್ಷಗಾನ ಅಭಿಮಾನಿಗಳ ಕೈಗೊಪ್ಪಿಸುವ ಅವಕಾಶವನ್ನು ನನಗಿತ್ತ ಕಲಾಮಾತೆಯನ್ನು ಅನನ್ಯ ಭಕ್ತಿಯಿಂದ ವಂದಿಸುತ್ತೇನೆ.

ಭವದೀಯ

ನವಿ ಮುಂಬಯಿ — **ಎಚ್. ಬಿ. ಎಲ್. ರಾವ್**

ದಿನಾಂಕ ೧೮-೧೦-೨೦೦೨ — ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ.

ಮುನ್ನುಡಿ

ಅಚ್ಚಾದ ಯಕ್ಷಗಾನ ಕೃತಿಗಳು ದುರ್ಲಭವಿದ್ದ ಕಾಲದಲ್ಲಿ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದವರು ಅಂತಹ ಅಪ್ರಕಟಿತ ಕೃತಿಗಳನ್ನು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಿಸಿ ಯಕ್ಷಗಾನ ಕಲಾಸಕ್ತರ ಪ್ರೀತಿಗೆ ಪಾತ್ರರಾದರು. ಇಂದು ಅದೇ ಬಗೆಯ ಕೆಲಸವನ್ನು ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿಯವರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಮಾಡಿಕೊಂಡು ಬರುತ್ತಿರುವುದು ಸಂತೋಷಕ್ಕೆಡೆಗೊಡುವ ಸಂಗತಿ.

ಈಗಾಗಲೇ ನೂರಕ್ಕೂ ಮಿಕ್ಕ ಅಪ್ರಕಟಿತ ಯಕ್ಷಗಾನ ಕೃತಿಗಳನ್ನು ಹಲವು ಸಂಪುಟಗಳಲ್ಲಿ ಹೊರತಂದಿರುವ ಶ್ರೀ ಎಚ್. ಬಿ. ಎಲ್. ರಾಯರು ಈ ಸಂಪುಟದಲ್ಲಿ ಇನ್ನೂ ಏಳು ಕೃತಿಗಳನ್ನು ಸಂಗ್ರಹಿಸಿದ್ದಾರೆ.

೧) ಇಂದ್ರಕೀಲಕ–ಜಟಾಸುರ ಕಾಳಗ

೨) ಮೂರೂವರೆ ರತ್ನ

೩) ಶ್ರೀಕೃಷ್ಣ ಕಾರುಣ್ಯ

೪) ಅಜಾಮಿಳ ಚರಿತ್ರೆ

೫) ಶಕಟಾಸುರಾದಿಗಳ ವಧೆ

೬) ಔಷಧಿ ಪ್ರಸಂಗ

೭) ದಾವಿದ ವಿಜಯ

–ಇವು ಇಲ್ಲಿ ಸಂಪಾದಿತವಾದ ಆ ಏಳು 'ಯಕ್ಷಗಾನ ಪ್ರಸಂಗ'ಗಳು.

ಇಂದ್ರಕೀಲಕ–ಜಟಾಸುರ ಕಾಳಗವು ಇಲ್ಲಿರುವ ಏಳು ಪ್ರಸಂಗಗಳಲ್ಲಿ ಪ್ರಾಚೀನತಮ. ಪ್ರಸಂಗದ ಕೊನೆಗೆ ಕವಿಯೇ ಹೇಳಿಕೊಂಡಿರುವಂತೆ ಇದರ ಕರ್ತೃ ಧ್ವಜಪುರದ ನಾಗ. ಮಹಾಭಾರತದ ಇಂದ್ರಕೀಲಕ, ಸೌಗಂಧಿಕಾ ಹರಣ ಮತ್ತು ಜಟಾಸುರ ವಧೆಗಳೇ ಈ ಪ್ರಸಂಗದ ಕಥಾವಸ್ತು.

ಮುಂದಿನ ನಾಲ್ಕು ಪ್ರಸಂಗಗಳನ್ನು ರಚಿಸಿದವರು ಹಿರಿಯರೂ ಅನುಭವಿಗಳೂ ಆದ ಭಾಗವತ ಶ್ರೀ (ಕಿರಿಯ) ಬಲಿಪ ನಾರಾಯಣ ಭಾಗವತರು. ಪರಂಪರಾಗತ ಯಕ್ಷಗಾನದ ನಿಖರ ಮಾಹಿತಿಯನ್ನು ನೀಡಬಲ್ಲ ಈ ಭಾಗವತರ ಇತರ ಕೃತಿಗಳಂತೆಯೇ ಇವು ಕೂಡಾ ರಂಗಸ್ಥಳದಲ್ಲಿ ಸಾಕಷ್ಟು ಯಶಸ್ವೀ ಪ್ರಯೋಗಗಳನ್ನು ಕಂಡ ಜನಪ್ರಿಯ ಕೃತಿಗಳು.

'ಶ್ರೀಕೃಷ್ಣಕಾರುಣ್ಯ'ದಲ್ಲಿ ತನ್ನ ಸ್ವಂತ ಪದ್ಯಗಳನ್ನಲ್ಲದೆ, ಹಳೆಯ ಪ್ರಸಂಗಗಳಾದ ಬಾಲಲೀಲೆ, ಕಂಸವಧೆ, ರೇವತಿ ಕಲ್ಯಾಣ, ರುಕ್ಮಿಣೀ ಸ್ವಯಂವರಗಳಿಂದಲೂ ಯಥೋಚಿತವಾಗಿ ಸ್ವೀಕರಿಸಿ, ದಿ। ದಾಮೋದರ ಮಂಡೆಚ್ಚರ ನಿರ್ದೇಶದಂತೆ ಪ್ರಸಂಗ ರಚಿಸಿರುವುದಾಗಿ ಲೇಖಕರು ಸ್ಮರಿಸುತ್ತಾರೆ.

Scanned by CamScanner

ಅಜಾಮಿಳ ಚರಿತ್ರೆಯು ಭಾಗವತದಲ್ಲಿಯ ಪ್ರಸಿದ್ಧವಾದ ವಿಶಿಷ್ಟ ಕಥಾಪ್ರಸಂಗ. ಹರಿಪಾರಮ್ಯವನ್ನು ಸಾರುವ ಈ ಕಥಾವಸ್ತುವನ್ನು ಹೆಚ್ಚು ಕವಿಗಳು ಬಳಸಿಕೊಂಡ ಹಾಗೆ ಕಾಣುವುದಿಲ್ಲ.

ಶ್ರೀ ಬಲಿಪರ 'ಶಕಟಾಸುರಾದಿಗಳ ವಧೆ'ಯ ಜೊತೆಗೇ ಚಾಲ್ತಿಯಲ್ಲಿರುವ 'ಶಕಟ-ಧೇನುಕ ವಧೆ'ಯನ್ನೂ ಸೇರಿಸಿಕೊಂಡಿರುವುದು ಆಸಕ್ತರಿಗೆ ಉಪಯುಕ್ತ ವಾಗಿದೆ.

ಈ ಏಳೂ ಕೃತಿಗಳ ಪೈಕಿ ಐತಿಹಾಸಿಕ ಕಥಾವಸ್ತುವನ್ನೊಳಗೊಂಡ ಏಕೈಕ ಕೃತಿ –ದ್ರಾವಿಡ ವಿಜಯ. ಯಕ್ಷಗಾನ ವಿದ್ವಾಂಸರೂ ವಿಮರ್ಶಕರೂ ಆದ ಶ್ರೀ ಪು. ಶ್ರೀನಿವಾಸ ಭಟ್ಟರ ಇದುವರೆಗೆ ಪ್ರಕಟಗೊಂಡ ರಚನೆಗಳಲ್ಲಿ ಯಕ್ಷಗಾನ ಪ್ರಸಂಗವೂ ಇದು ಒಂದೇ. ಅಂತೆಯೇ ಕುತೂಹಲಕಾರಿ ಕೃತಿ.

ಈ ಏಳು ಪ್ರಸಂಗಗಳನ್ನೂ ಶ್ರಮವಹಿಸಿ ಸಂಪಾದಿಸಿ ಒಂದು ಸಂಪುಟವನ್ನಾಗಿ ಪ್ರಕಟಿಸಿರುವ ಪದವೀಧರ ಯಕ್ಷಗಾನ ಸಮಿತಿಯ ಪ್ರಯತ್ನ ಶ್ಲಾಘನೀಯ. ಅಂತೆಯೇ ಈ ಪ್ರಕಾಶಕರು ಅಭಿನಂದನಾರ್ಹರು.

ಕಟೀಲು

ಅಜಾರು ನಾಗರಾಜ ರಾಯ



ಯಕ್ಷಗಾನ ಕಲಾರಾಧಕ

ದಿ। ಕಣಂಜಾರು ಆನಂದ ಶೆಟ್ಟಿ

Scanned by CamScanner

ಯಕ್ಷಗಾನ
ಅಜಾಮಿಳ ಚರಿತ್ರೆ

ಪ್ರಸಂಗಕರ್ತರು

ಕಿರಿಯ ಬಲಿಪ ನಾರಾಯಣ ಭಾಗವತ

Scanned by CamScanner

ಪಾತ್ರವರ್ಗ

- ಕುಶನಾಭ
- ವಾಯು
- ಬ್ರಹ್ಮದತ್ತ ಋಷಿ
- ಕುಶನಾಭನ ಪುತ್ರಿಯರು
- ಅಜಾಮಿಳ
- ಸುಶೀಲೆ
- ಮದಿರೆ
- ಯಮ
- ಪಾಪಿಗಳು
- ಮದಿರೆಯ ಹತ್ತುಮಕ್ಕಳು
- ಸುಶೀಲೆಯ ಮಕ್ಕಳು
- ಚಿತ್ರಗುಪ್ತ
- ಚಿತ್ರ
- ಕ್ಷಯಮಂತ್ರಿ
- ಘೋರ
- ವಿಷ್ಣು
- ನಂದ
- ಸುನಂದ
- ಚಂಡ
- ಪ್ರಚಂಡ
- ಸ್ತ್ರೀಯರು
- ಪುರೋಹಿತ ಇತ್ಯಾದಿ.

॥ ಶ್ರೀಗುರುಭ್ಯೋ ನಮಃ ॥

ಶ್ರೀಮನ್ಮಹಾಭಾಗವತದೊಳಗಣ

ಅಜಾಮಿಳ ಚರಿತ್ರೆ

॥ ಶಾರ್ದೂಲವಿಕ್ರೀಡಿತಂ ॥

ಗೌರೀಪುತ್ರ ವಿನಾಯಕಂ ಗಜಮುಖಂ ವಿಘ್ನೇಶ್ವರಂ ಸುಂದರಮ್ ।
ಹೇರಂಬಂ ಕಟಿ ಶೋಭಿತಂ ಫಣಧರಂ ಪಾಶಾಂಕುಶಂ ರಾಜಿತಮ್ ॥
ಮಾರಾಂಗಾರಿ ಕುಮಾರ ರಕ್ತವಸನೋದ್ಧಾರಂ ಸದಾ ಶೋಭಿತಮ್ ।
ಪಾರಾವಾರಸುಭಕ್ತ ಕೋಟಿನಿಚಯಂ ರಕ್ಷಂ ನಮಃ ಪಾತು ಮಾಮ್ ॥ ೧ ॥

॥ ಸುರುಟಿ– ಏಕತಾಳ ॥

ಪಾಲಾಂಬುಧಿಶಯನ । ಸ್ಥಿತಿಪತಿ । ಶ್ರೀಲತಾಂಗಿ ರಮಣ ॥ ನಾಲುಕು ಕರ ಯುಗದೊಳ್ಗದೆ ಪದ್ಮ ವಿ । ಶಾಲಿ ಶಂಖಚಕ್ರಾಲಯ ರಂಜಿತ ॥ ಪಾಲಾಂ ॥ ೧ ॥ ಸುರಮುನಿ ವಂದಿತನೆ । ನಿರ್ಜರ । ನೆರವಿ ಸಂಪೂಜಿತನೆ ॥ ಉರಗಶಯನ ಶ್ರೀಕರ ಕರುಣಾ ರ್ಣವ । ಗರುಡಗಮನ ಭಕುತರ ಪರಿಪಾಲಕ ॥ ಪಾಲಾಂ ॥ ೨ ॥ ಸರಸಿಜದಳನಯನ । ತ್ರಿನಯನ । ಪರಮ ಮಿತ್ರ ರತುನಾ ॥ ಭರಣ ವಿರಾಜಿತ ಸ್ಥಿರ ಪದವಿಯೊಳಿಹ । ದುರಿತ ನಿವಾರಣ ಪೊರೆ ನಾರಾಯಣ ॥ ಪಾಲಾಂ ॥ ೩ ॥

॥ ವಾರ್ಧಿಕ್ಯ ॥

ವಿಧಿ ಮೃಡ ಸರಸ್ವತಿಯ ಸಿರಿಯಂಬಿಕೆಯ ಧರೆಯ । ಪದತಳಕೆ ಮಣಿದು ಪೂರ್ವದ ಕವಿಗಳಂ ನೆನೆದು । ತುದಿ ಬುಡವನರಿಯದಜ್ಞಾನದಿಂ ಭಾಗವತವದರೊ ಳೊಳಗಿರ್ಪುದೊಂದು ॥ ಅಧಿಕ ಪಂಡಿತನಾದಜಾಮಿಳನ ಚರಿತೆಯಂ । ಹೃದಯ ಮನಕರಿದಂತೆ ಯಕ್ಷಗಾನದಿ ಬರೆವೆ । ನಿದ ಸೂರಿಗಳು ನೋಡಿ ಮನ್ನಿಸೆಂದೆರಗಿ ಪೇಳಿದಪೆ ನೀ ಮಹಕೃತಿಯನು ॥ ೧ ॥

॥ ಕಂದ ॥

ಚಿತ್ತವಿಸ್ಟೈಯ್ಯ ಪರೀಕ್ಷಿತ । ಪೃಥ್ವಿಪನುನ್ನತದಜಾಮಿಳನ ಸತ್ಕಥೆಯಂ ॥ ಬಿತ್ತರಿಪೆನು ಹರಿ ಪದವಂ । ಮತ್ತವ ಸೇರ್ದುದನು ಕೇಳ್ವುದೆನುತಿಂತೆಂದಂ ॥ ೧ ॥

॥ ಸೌರಾಷ್ಟ್ರ– ತ್ರಿಪುಟತಾಳ ॥

ಪೃಥ್ವಿಪಾಲಕ ಕೇಳ್ ಕನೂಜ ಪ್ರ । ಶಸ್ತ ಪುರ ಕುಶನಾಭನೆಂಬುವ । ಕ್ಷತ್ರಿಯೋ ತ್ತಮನಾಳುತಿರ್ದನು । ಸತ್ವದಿಂದ ॥ ೧ ॥ ಸುರಗಣಿಕೆಯರೊಳಾ ಘೃತಾಚಿಯ ।

Scanned by CamScanner

ಬೆರೆದು ಶತ ಕನ್ಯೆಯರ ಪಡೆಯುತ । ಕೊರತೆಯಿಲ್ಲದೆ ಸಲಹುತೀರ್ದನು । ಸರಸದಿಂದ ॥ ೨ ॥ ಅಂದಿನೋಲಗದೆಡೆಗೆ ಸುತೆಯರು । ಬಂದು ಮುಖಕಂದಿಸುತ ನಿಂದಿರು । ವಂದವೀಕ್ಷಿಸಿ ತಳ್ಕಿಸುತವರೊ । ಳೆಂದನಾಗ ॥ ೩ ॥

॥ ನಾಟಕುರಂಜಿ- ರೂಪಕತಾಳ ॥

ನೂರು ಮಂದಿ ಬಾಲೆಯರೆ ಸ । ವಾರಿ ಯೇನಿರೆ । ಭಾರಿ ತಾಪ ಹೊಂದಿ ಬಾಡಿ । ಮೋರೆ ಕುಂದಿರೆ ॥ ಕಾರಣಂಗಳೇನು ದಾಸಿ । ವಾರದಿಂದಲಿ । ತೋರಿದ ದುರ್ಘಟನವು ಪೇಳ್ ವ । ಯ್ಯಾರ ಬೆಡಗಿಲಿ ॥ ೧ ॥

॥ ಆರ್ಯಾಸವಾಯಿ ॥

ನುಡಿದರು ಜನಕನೆ ಅಡವಿಯ ಕೊಳದಲಿ । ಜಡ ಕೇಳಿಯನತಿ ಬೆಡಗಿಂದ ॥ ನಡೆಸುತ ಬರುವೆವು ಕೊಡು ನಮಗನುಮತಿ । ತಡಮಾಡದೆ ಬಹೆ ದೃಢದಿಂದ ॥ ೧ ॥ ಅಕ್ಕನೊಡನೆ ನಾಲ್ ದಿಕ್ಕಿನ ವಿಭವವ । ಚೊಕ್ಕದಿ ನೋಡಿ ಮನಕ್ಕೆ ಹಿತ ॥ ದಕ್ಕಿಸಿ ಬಹೆವು ಕೈಯಿಕ್ಕಿ ಸುಮಂಗಳ । ಲೆಕ್ಕವಿರದೆ ಕೊಯ್ದುಕೊಳುತ ॥ ೨ ॥

॥ ನವರೋಜು- ಏಕತಾಳ ॥

ಪಕ್ಷಿಯ ಸಂಕುಲವದನು । ನಿ । ರೀಕ್ಷಿಸಿ ನೀರ್ಝರಿಗಳನು ॥ ವೃಕ್ಷಕೆ ಸುತ್ತಿಹ ಸೂಕ್ಷ್ಮಲತಾದಿಗ । ಳೆಚ್ಚರದಲಿ ಗುಹೆಯಚ್ಚರಿ ನಿರುಕಿಸಿ ॥ ೧ ॥ ತಿನುವ ಫಲಂಗಳ ಕೊಯ್ದು । ತಾ । ತನೆ ತಹೆವೂ ನಿನಗಾಯ್ದು ॥ ವನಿತೆಯರೀ ನೂರ್ಜನರಿಗೆ ಭಯವೆಮ । ಗಿನಿತಿಲ್ಲವು ಬೇಗನೆ ಕಳುಹೆಮ್ಮನು ॥ ೨ ॥

॥ ಭೈರವಿ- ಝಂಪೆತಾಳ ॥

ಚಿತ್ರಾಂಗಿಯರೆ ನಿಮ್ಮ । ಚಿತ್ತದಾಳವನರಿತೆ ॥ ಸುತ್ತಾಡಿ ದೆಸೆ ತಪ್ಪಿ । ಅತ್ತಿತ್ತ ಗಲದೆ ॥ ೧ ॥ ಜಲಕ್ರೀಡೆ ವನಭೋಗ । ದೊಳು ತೃಪ್ತಿ ಹೊಂದುತಲಿ ॥ ಬಲು ಬೇಗ ಬನ್ನಿರೆನು । ತಲಿ ಕಳುಹಿಸಿದನು ॥ ೨ ॥ ಪೊರಟು ಬಂದಾ ವನಕೆ । ತರುಣಿಯರು ಕೊಳನ ತಡಿ । ಗಿರಿಸಿ ರತುನಾಭರಣ । ಪರಮ ಸಂತಸದಿ ॥ ೩ ॥

॥ ಸುರುಟಿ- ಏಕತಾಳ ॥

ಜಡವಂ ಪ್ರಾರ್ಥಿಸುತ । ಸ್ತ್ರೀಯರು । ಒಡಲೊಳು ಹರುಷಿಸುತ ॥ ಬಡನಡುವಬಲೆಯರಡವಿಯ ಕೊಳದಲಿ । ಒಡನೆ ನೆಗೆದು ಕಂಗೆಡದೆ ಮೇಲಡರುತ ॥ ೧ ॥ ಸೂಳಿಡುತಡಿಗಡಿಗೆ । ಸೆಳೆಯುತ । ಕಾಲ್ಗಳ ನೀರೊಳಗೆ ॥ ಆಳ ಪಿಡಿದು ತನು ಮೇಲ್ಬೀಳುತ್ತಲಿ । ಬಾಲೆಯರೇಳುತ ಗೋಳಿಡುತೊದಗುತ ॥ ೨ ॥ ತಬ್ಬಿಕೊಂಡು ಬಿಡುತ । ಹೆಗಲೊಳು । ಇಬ್ಬರಡರಿ ನಿಲುತ ॥ ಅಬ್ಬರಿಸುತ್ತಲಿ ಕಿಬ್ಬದಿಯಾಕುತ । ಉಬ್ಬಸ ಬರಿಸುತ ಕೊಬ್ಬಿದಂಗನೆಯರು ॥ ೩ ॥

॥ ಭಾಮಿನಿ ॥

ದಣಿದು ಮೇಲಡರುತ್ತ ಕುಪ್ಪಸ । ಕನಕ ಜರಿ ಶಾಲೆಗಳ ಬಲು ವಿಧ । ವೆನಿಪ ಹಾರಂಗಳನು ಧರಿಸುತ ಸುಮವನರಸುತಲಿ ॥ ವನದೊಳಗೆ ನಾಲ್ದೆಸೆಗೆ ಸುಳಿಯುತ । ಲಿಣಿಕಿ ಗುಹೆ ಫಲ ಪುಷ್ಪವರಸುತ । ಲನಕ ಖಗಗಳ ನಿನದವಾಲಿಸುತಿಪ್ಪ ಸಮಯದಲಿ ॥ ೧ ॥

॥ ಶಂಕರಾಭರಣ- ತ್ರಿಪುಟತಾಳ ॥

ಪ್ರಾಣ ರೂಪನು ಜಗಕೆನುತ ಪವ । ಮಾನನತ್ಯಾನಂದದಿ ॥ ಕಾನನದಿ ಚರಿಸುತ್ತ ಬಂದನು । ಏನನೆಂಬೆ ॥ ೧ ॥ ಗ್ರೀಷ್ಮಋತುವೀ ಕಾಲ ಸ್ತ್ರೀಯರ । ರಶ್ಮಿ ಬೀರುತ್ತಿರುವುದು ॥ ವಿಸ್ಮಯವನೀಕ್ಷಿಪಡೆ ಬಂದನು । ಸೂಕ್ಷ್ಮತರದಿ ॥ ೨ ॥ ನಿಂದು ನಿಜ ರೂಪದಲಿ ಕಾಣಿಸಿ । ಗಂಧವಹನನು ಭ್ರಮಿಸುತ ॥ ನೊಂದು ಸ್ಮರಹತಿಯಿಂದವರೊಳಿಂ । ತೆಂದ ಕರೆದು ॥ ೩ ॥

॥ ಕಲ್ಯಾಣಿ- ಆದಿತಾಳ ॥

ನವಯೌವನದ ವಿಭವದಂಗನೆಯರೆ । ಹವಣವೇನು ಹಳುವಕೆ ಬರಲು । ಯುವತಿಯರಿರ ನಿಮ್ಮವರ ನೋಡಿ ನಾ । ಸವೆದೆನು ದೇಹದಿ ಬೆವರಿನೊಳು ॥ ದ್ರವಿಸುತ । ಬಂದೀಗಲೆ ಕರದಿಂ । ದವುಕುತ । ಪಿಡಿಯುತ್ತಲಿ ಅಧರದ । ದ್ರವರಸ ನೀಡುತ । ನವ ಕುಚವೆದೆಗೊ । ತ್ತುವುದೊಂದಿಗೆ ಅನು । ಭವಿಸಿರಿ ದಿವ ಸುಖ ॥ ೧ ॥ ಇಂದ್ರನಂತೆ ಮುದ ಹೊಂದಿಹ ದಿಗುಪತಿ । ಗಂಧವಾಹ ನಾನು । ತ್ರಿಜಗಕೆ । ಮಂದ ವಾಯು ಸೊಗಸಿಂದುಣ್ಣಿಸಿ ನಡೆ । ತಂದು ಕಾಮಿಸಿಹೆನು ॥ ಕುಂದದೆ । ನಿಮ್ಮೆಲ್ಲವರೊಳು ಸುಖ । ಹೊಂದದೆ । ಹಿಂದಿರುಗೆನು ನಿಶ್ಚಯ । ವೆಂದಾಡುತ್ತವ ಮುಂದ್ವರಿಯುವುದರಿ । ತೊಂದಾಗುತ ಹಳಿದೆಂದರಂಗನೆಯರು ॥ ೨ ॥

॥ ದೇಶಿ- ಅಷ್ಟತಾಳ ॥

ಸಾರೆಲ । ನಿನ್ನಯ ಹೆಗ್ಗಳಿಕೆಗಳು । ಸಾಕೆಲ । ಹಿಂದೇ ಸಾರೆಲ ॥ ಪ ॥ ಯಾರೆಲಾ ಮಾರುತನೊ ನೀ ವಿ । ಚಾರಹೀನ ಭಾರಿ ಬಗುಳಿ ॥ ಸಾರಮೇಯ ಜಾರಿದಂತೆ । ಸಾರುವೆಯ ಜಾರ ಚೋರ ॥ ೧ ॥ ರಕ್ಕಸರಿಗೆ ಸಿಕ್ಕದಂತೆ । ದಿಕ್ಕುದೆಸೆ ಪ್ಯಾದಿಕ್ಕೋಡುವ ಸು ॥ ರರ್ಕಳಧಿಕ ವಿಕ್ರಮಗಳ । ನೊಕ್ಕಣಿಸದೆ ಬೆಕ್ಕಿನಂತೆ ॥ ೨ ॥ ಕಾಡಾಡಿಗಳೀ ಕನ್ನಿಕೆಯರೆಂ । ದಾಡಿ ಸುಖಿಸಿ ದೂಡುವಾಶೆ ॥ ಮಾಡಿ ಬಂದ ಖೋಡಿ ನಿನಗೆ । ನಾಡಿಲ್ಲದೋಲ್ ಝಾಡಿಸುವೆವು ॥ ೩ ॥ ನಾಡರಾಜನಣುಗೆಯವರ । ಕೂಡೆ ರತಿಕ್ರೀಡೆಯಾಟ ॥ ನೀಡುವೆ ಬಾ ಹೇಡಿಯೆಂದು । ಆಡಿ ಕಾಷ್ಟ ಸೂಡಿ ಪಿಡಿದು ॥ ೪ ॥ ತೆಕ್ಕೊ ಸುಖವ ಮುಕ್ಕುಮಣ್ಣ । ಚಕ್ರಿ ಹರನೊ ಶಕ್ರ ಬರಲಿ ॥ ಸೊಕ್ಕನಿಳಿಪ ತಕ್ಕ ಮದ್ದಿ । ದಿಕ್ಕೊ ಎಂದು ಉಕ್ಕಿ ಬಡಿದರ್ ॥ ೫ ॥

Scanned by CamScanner

॥ ಕಂದ ॥

ಮಾರುತನಂ ಮುತ್ತುತ್ತಲಿ । ನೂರು ಸತಿಯವರು ಕೆರಳ್ದು ಹೊಡೆಯುತ್ತಿರಲುಂ ॥ ದಾರಿಯ ಗಾಣದೆ ಗಗನ । ಕ್ಕೇರುತ ಖತಿಯಿಂದ ಪೇಳ್ದಕಿನಿಸಿಂದಾಗಂ ॥ ೧ ॥

॥ ಮಾರವಿ- ಏಕತಾಳ ॥

ನರಕನ್ನೆಯರಿರ ಮರುತನ ಬಲುಹನು । ಅರಿಯದೆ ಧಿಕ್ಕರಿಸಿ ॥ ಸ್ಮರ ಹತಿಗೆನ್ನನು ಗುರಿ ಮಾಡುತ ಹೊಡೆ । ದಿರಿ ಬಿಡುವೆನೆ ಸಹಿಸಿ ॥ ೧ ॥ ಕೊಬ್ಬಿದಂಗನೆಯರೆ ಕುಬ್ಜರೆನಿಸಿ ಭೂ । ಗರ್ಭವಿದೇ ಪುರದಿ ॥ ಜಬ್ಬೆಯಾಗಿರೆಂದುಬ್ಬಿ ಶಪಿಸಿ ಮರು । ತಬ್ಬರದಲಿ ನಡೆದ ॥ ೨ ॥

॥ ನೀಲಾಂಬರಿ- ಏಕತಾಳ ॥

ಇನಿತಾಯ್ತೆ ಅಕಟಕಟ । ನಮಗೆ ಶುಭ । ವನು ಕಾಣೆಪರು ದುರ್ಘಟ ॥ ಅನಿಲ ಶಪಿಸಿ ಪೋದನು । ಕುಬ್ಜ ಸ್ವರೂಪ । ವನು ತಾಳ್ದೆವ್ ಗತಿಯಿನ್ನೇನು ॥ ೧ ॥ ಜಲಕೇಳಿ ವನ ವಿಹಾರ । ಏಕೆ ಬೇಕಾಯ್ತು । ತಿಳಿಸಲ್ಯಾರಿಗೆ ಬೇಸರ ॥ ನಳಿನಜ ಬರೆದಾ ಲಿಪಿ । ಮೀರ್ವವರ್‍ಯಾರು । ಹಳುವದಿ ಬಂತೆ ದುರ್ಗತಿ ॥ ೨ ॥ ಇಲ್ಲಿ ದುಃಖಿಸಿ ಫಲವು । ಸಿಗದು ಪೇಳ್ವು । ದೆಲ್ಲ ತಂದೆಗೆ ವೇದ್ಯವು ॥ ಅಲ್ಲಿ ಬಿನ್ನೈಪುದೆಂದು । ಒಂದಾಗುತೆದ್ದು । ಮೆಲ್ಲನೈತಂದರಂದು ॥ ೩ ॥

॥ ವಾರ್ಧಿಕ್ಯ ॥

ನೊಂದುಕೊಂಡಬಲೆಯರು ನಡೆದ ವೃತ್ತಾಂತಗಳ । ತಂದೆಗೆರಗುತ್ತೆಂದರಡವಿಯಲಿ ಮಾರುತನು । ಬಂದೆಮ್ಮ ಕಾಮಿಸಲು ಕೆರಳಿ ದಂಡಿಸಲಾತ ಖಾತಿಯಿಂ ಶಾಪವಿತ್ತ ॥ ಮುಂದೆ ನೀವೀ ಜಗದಿ ಕುಬ್ಜರಾಗೆಂದರು ಹಿ । ಸಂದನವನಿನ್ನು ನೀವೇ ಗತಿಯು ನಮಗೆ ಶುಭ । ವೆಂದೋರಿ ಸಲಹೆಂದು ಪೊರಳೆ ಪಾದಾಬ್ಜದಲಿ ಪಿಡಿದೆತ್ತಿ ನೃಪನೆಂದನು ॥ ೧ ॥

॥ ಕಂದ ॥

ಕುವರಿಯರಿರ ಧೈರ್ಯದೊಳಿರಿ । ಹವಣವನರಿವೆನು ಎನುತ್ತ ಪೊರಟಾಕ್ಷಣದೊಳ್ ॥ ರವಿಗೆಣೆ ಮುನಿ ಬ್ರಹ್ಮದತ್ತ । ನವನಿದ್ದೆಡೆಗಯ್ದಿ ವಂದಿಸುತ್ತಿಂತೆಂದಂ ॥ ೧ ॥

॥ ಘಂಟಾರವ- ರೂಪಕತಾಳ ॥

ಬಾಲಯೋಗಿಯೆ । ಬ್ರಹ್ಮದತ್ತನೆ । ಬ್ಹಾಳ ಚಿಂತೆಯ । ತಾಳ್ದು ಬಂದೆನು ॥ ಬಾಲಕಿಯರ್ ಶತ । ರಡವಿ ಕೇಳಿಗೆ । ಆಲಯ ಬಿಟ್ಟು । ಹೋದ ದಿವಸವೆ ॥ ೧ ॥ ಮರುತನವರೊಳು । ಸ್ಮರನ ಕೇಳಿಗೆ । ಭರದಿ ಯಾಚಿಸಿ । ಎರಗೆ ಮೇಲಕೆ ॥ ಕೆರಳಿ ಹೊಡೆಯಲು । ಮುನಿದು ವಾಯುವು । ಧರೆಯೊಳ್ಕುಬ್ಜರಾ । ಗ್ಯೆಂದು ಶಪಿಸಲು

॥ ೨ ॥ ಸಿಟ್ಟಿನಿಂದಲಿ । ಹೋದನಾತನು । ಪುಟ್ಟಿದೆನ್ನಯ । ಸುತೆಯರಳುವರು ॥ ಧಿಟ್ಟಿಸಿನ್ನು ನೀ । ಗತಿಯ ತೋರಿಸು । ಅಷ್ಟೆಂಬಾಗ ಮೌ । ನೀಂದ್ರನೆಂದನು ॥ ೩ ॥

॥ ಕಾಂಬೋದಿ- ಝಂಪೆತಾಳ ॥

ಕೇಳು ಕುಶನಾಭ ಭೂಲೋಲನೆನ್ನಯ ತಪದ । ಗಾಲಿಯಲಿ ನಿನ್ನ ಬಾಲೆಯರ ॥ ಕೀಳು ಕುಬ್ಜವ ಕಳೆದು ಮೇಲೆ ವರಿಸುವೆನೆಲ್ಲ । ಕಾಲ ಕಳೆಯದೆ ಲಗ್ನ ಮುಖದಿ ॥ ೧ ॥ ಎನಲು ಶತಬಾಲೆಯರ ಜನಪ ಕರೆಸುತ್ತಾಗ । ಮುನಿ ಮುಖದಿ ಶಾಪ ತೊಲಗಿಸಲು ॥ ತನುಜೆಯರನೊಪ್ಪಿಸುತ ದಿನಪ ತೇಜಸ್ವಿ ಗಿ । ತ್ತನು ಲಗ್ನಮಾಡಿ ತರಳೆಯರ ॥ ೨ ॥ ಎಂದ ಮುನಿ ಈ ಪುರಕೆ ಮುಂದೆ ಕನ್ಯಾಕುಬ್ಜ । ವೆಂದೆಂಬ ಪೆಸರಲ್ಲದಿನ್ನು ॥ ಒಂದಿದೆ ಕನೂಜಾಖ್ಯೆಯಿಂದ ರಂಜಿಸಲೆಂದು । ಚೆಂದದಿಂದಿರ್ದ ಋಷಿವರ್ಯ ॥ ೩ ॥ ಭೂಪಾಲನಿತ್ತ ಮೌನೀಪತಿಯ ಬೀಳ್ಗೊಂಡು । ಶ್ರೀಪತಿಯ ಧ್ಯಾನಿಸುತ ಬರುತ ॥ ಲೋಪವಿಲ್ಲದೆ ರಾಜ್ಯದಾ ಪಾಲನೆಯೊಳೀರ್ದ । ನಾ ಪತಿವ್ರತೆ ಸತಿಯು ಸಹಿತ ॥ ೪ ॥

॥ ಮಧ್ಯಮಾವತಿ- ತ್ರಿಪುಟತಾಳ ॥

ಪೃಥ್ವಿಯೊಳು ಪೆಸರಾಂತ ಬಹು ಸಂ । ತೃಪ್ತ ಕನ್ಯಾಕುಬ್ಜ ದೇಶದಿ ॥ ಧಾತ್ರಿಸುರನಾಗೀರ್ಪಜಾಮಿಳ । ಶಾಸ್ತ್ರ ನೀತಿ ವಿಶಾರದ । ಎನಿಸಿಕೊಳುತ ॥ ೧ ॥ ದಾನಧರ್ಮದಿ ಯಾಗ ಭಾಗದಿ । ಸ್ಥಾನ ಗಳಿಸಿಹ ಹೋಮ ನೇಮದಿ ॥ ಪ್ರಾಣವಲ್ಲಭೆಯುಳಿದು ಪರ ಸ್ತ್ರೀ । ಯಾನು ಭೋಗಕ್ಕೆಳಸದೆ । ಸುಖದೊಳಿರುತ ॥ ೨ ॥ ಪರಮ ಪತಿವ್ರತೆ ಸತಿ ಸುಶೀಲೆಗೆ । ತರಳರಿರೆ ಹಲವಾರು ನಿಳಯದಿ ॥ ದುರಿತವಿಲ್ಲದೆ ಗೃಹ ಬೆಳಗುತಲಿ । ಮೆರೆದು ನಿತ್ಯವು ಬಾಳ್ದನು । ಬುಧಕುಲೇಂದ್ರ ॥ ೩ ॥

॥ ಭಾಮಿನಿ ॥

ಎಂದಿನಂದದಿ ನಿತ್ಯ ಕರ್ಮಕೆ । ತಂದಪೆನು ಕುಶ ಸಮಿಧೆ ಪುಷ್ಪಗ । ಳೆಂದು ದೂರಕೆ ನಡೆದ ಕಾಡಿನ ನಡುವೆ ದಾರಿಯಲಿ ॥ ಬಂದುದೋ ದುರ್ದೆಸೆಯು ವಿಧಿಲಿಪಿ । ಯಂದವೋ ಯೆನುವಂತೆ ವನದೊಳು । ನಿಂದು ಕಂಡನು ಜೀರ್ಣದಿಂದಿಹ ಶೂದ್ರನಾಲಯವ ॥ ೧ ॥

॥ ಯಮುನಾಕಲ್ಯಾಣಿ- ಅಷ್ಟತಾಳ ॥

ಹೊರಗೆ ದುಡಿವ ನಾರಿಯನು ಕಂಡು । ವಿಪ್ರ । ಬೆರಗಾದ ನೀ ಕಾಡಿನೊಳಿರುವಂಗನೆಯರಾರು ಗೊಂಡು ॥ ತರುಣಿ ರಂಜಿಪಳೀಕೆಗೆಣೆಯಿಲ್ಲ । ಧರೆಯೊ । ಳಿರುವಂಗನೆಯರಾರು ಗೊಂಡು ॥ ತರುಣಿ ರಂಜಿಪಳೀಕೆಗೆಣೆಯಿಲ್ಲ । ಧರೆಯೊ । ಳಿರುವಂಗನೆಯರಾರು ಸರಿಯಲ್ಲ ॥ ೧ ॥ ಎನ್ನರಸಿಯ ಮಿಗಿಸಿಹಳೀಕೆ । ವಿಧಿಯು । ಚೆನ್ನಾಗಿ ದಣಿದ ಸೃಜಿಪುದಕ್ಕೆ ॥ ಕನ್ನೆ ಷೋಡಶ ಪ್ರಾಯದವಳಿಂದು । ಬೇರೆ । ವನ್ಯ ದೇವತೆಯೊ ತಿಳಿಯೆನೊಂದು ॥ ೨ ॥ ಇವಳನು ನುಡಿಸದವನು ಮೂಕ । ನೋಡ । ದವನಂಧ

Scanned by CamScanner

ಮಾತು ಕೇಳದ ಮೂರ್ಖ ॥ ಕಿವುಡನೆ ನಿಶ್ಚಯವದಕಾನು । ಮಾತಾ । ಡುವೆನೆಂದು ಯಿದಿರು ಬಂದೆಂದನು ॥ ೩ ॥

॥ ಜಂಜೂಟಿ- ಏಕತಾಳ ॥

ಚಂದನಗಂಧಿನಿ ಕುಂದರದನೆ ರಾ । ಕೇಂದುವದನೆ ಸುಂದರಿ ನೀರೆ ॥ ಬಂದೀ ಕಾಡೊಳು ನಿಂದಿಹೆಯೊಬ್ಬಳೆ । ತಂದೆ ತಾಯ್ಗಳಾರೆಂದುಸುರೆ ॥ ೧ ॥ ಮಂದಿರವದು ಬಹು ಹೊಂದಿದೆ ಜೀರ್ಣವ್ಯಾ । ರ್ದಂದರುಹೆಲೆ ವಾರಣಯಾನೆ ॥ ಸಂದೇಹವ ಬಿಡುವಂದದ ಪೆಸರೇ । ನೆಂದಾಡೆಲೆ ಕೋಕಿಲಗಾನೆ ॥ ೨ ॥

॥ ಕಂದ ॥

ನಾಚುತ ಚಂಡಾಲಂಗನೆ । ವಾಚಾಳಿಯೊ ಇವನು ಭೂಸುರೇಂದ್ರನ ತೆರ ನಿಹ ॥ ಯಾಚಿಪಗುತ್ತದ ಕೊಡಲೆಂ । ತ್ಯೋಚಿಸಿ ಬಹು ದೂರ ನಿಂದು ವಂದಿಸು ತೆಂದಳ್ ॥ ೧ ॥

॥ ಬೆಹಾಗ್- ಅಷ್ಟತಾಳ ॥

ದೂರ ನಿಲು ಮಹಾನುಭಾವ । ನಾರಿ ನಾ ಕಾಷ್ಟಗಳ ಮುರಿವ ॥ ಮಾರಿ ಮನುಜನಣುಗೆ ನಾನು । ದಾರಿಯದುವೇ ಹೋಗು ನೀನು ॥ ೧ ॥ ಬ್ರಾಹ್ಮಣರಿಗೆ ನಮ್ಮ ನೆರಳು । ನಿರ್ಮಲಕ್ಕೆ ತೊಡರೆನ್ನುವರು ॥ ಕರ್ಮ ಧರ್ಮ ಶ್ರೇಷ್ಠರ್ನೀವು । ನಮ್ಮೊಳೇಕೆ ಮಾತು ಹಲವು ॥ ೨ ॥ ಚಂದ್ರ ಸೂರ್ಯರೆಮ್ಮ ಗೃಹದಿ । ನಿಂದಿಹರು ನಿತ್ಯ ವನದಿ ॥ ಕೊಂದು ಮೃಗದ ಮಾಂಸ ತಿಂಬೆ । ತಂದೆ ತಾಯ್ಗಳಳಿದರ್ಹಿಂದೆ ॥ ೩ ॥ ಮದಿರೆ ಎಂಬ ಪೆಸರು ತನಗೆ । ಬುಧನಿನ್ನಿಲ್ಲಿ ನಿಲದಾ ಕಡೆಗೆ ॥ ಸದನಕಾಗಿ ಹೋಗು ಬೇಗ । ಸದರ ಸರಸ ನುಡಿಯದೀಗ ॥ ೪ ॥

॥ ಮಧ್ಯಮಾವತಿ- ತ್ರಿಪುಟತಾಳ ॥

ಮಾನಯುತೆಯರ ಧರ್ಮ ಕುಲ ಗುಣ । ಕೀ ನುಡಿಗಳೆಲ್ಲವಿದು ಸಹಜವು ॥ ನಾನಜಾಮಿಳ ನೀತಿಶಾಸ್ತ್ರ ವಿ । ಧಾನವರಿತಿಹ ಪ್ರಾಜ್ಞನು । ಕೇಳು ಮದಿರೆ ॥ ೧ ॥ ವೇದಶಾಸ್ತ್ರವ ಬಲ್ಲ ನೀವೀ । ಶೂದ್ರ ನಾರಿಯ ನೋಡಿ ನುಡಿದರೆ ॥ ಮೇದಿನಿಯೊಳಪಚಾರವಲ್ಲವೆ ॥ ಹಾದಿ ಬಂದುದ ನೋಡಿರಿ । ತೆರಳಿ ಗೃಹಕೆ ॥ ೨ ॥ ಕುಲವು ಕಟ್ಟಳೆ ಧರ್ಮ ಕರ್ಮವು । ತಿಳಿದ ಪೂರ್ವಜರಾಚರಣೆಗಳು ॥ ಇಳೆಯಧಿಪರಿಂದಾಯ್ತು ಬಲ ತನು । ಒಳಗಿಹೆಲ್ಲವರಾತ್ಮವು । ಒಂದೆ ನೋಡು ॥ ೩ ॥

॥ ಕೇತಾರಗೌಳ- ಅಷ್ಟತಾಳ ॥

ಬುಧರಿಗಾಧಾರ ನಿಗಮ ಶಾಸ್ತ್ರ ಮಂತ್ರಗ । ಳದು ದೈವಕಾಧಾರವು ॥ ಇದು ಬದ್ಧವಾದರೆ ತನುವಿನಾತ್ಮಕು ಎನ । ಗದಕೆ ಸಮ್ಮಂಥವೇನು ॥ ೧ ॥ ದೇಹವಳಿಯೆ ದಗ್ಧವಹುದೆಲ್ಲರಾತ್ಮವು । ಶ್ರೀಹರಿಯೊಳು ಸೇರ್ವುದು ॥ ಗೇಹವೆರಡು ನಮ್ಮದೀಗಾತ್ಮವೊಂದೆ ನಾ । ಮೋಹಿಸಿದೆನು ನಿನ್ನೊಳು ॥ ೨ ॥ ಆತ್ಮವೊಂದಾದರು

ನಿರ್ಮಲ ಜಗತಿಯೊಳ್ । ಜನ್ಮ ತಳೆದ ಜೀವಿಗೆ ॥ ಬೊಮ್ಮನ ಲಿಪಿಯಂತೆ ವರ್ಣವೃತ್ತಿಗಳಿಂಗೆ । ಕರ್ಮ ಬಾಧಿಸದಿಹುದೆ ॥ ೩ ॥ ಪಾಪಪುಣ್ಯಂಗಳು ಶ್ರೀಪತಿಯೊಳಗೈಕ್ಯ । ಈ ಪ್ರಪಂಚದೊಳೆಲ್ಲರ ॥ ದೀಪವು ಕುಣಿದಂತೆ ನಾಟಕವಿದು ಎಲ್ಲ । ಪಾಪ ನೀನೇನರಿವೆ ॥ ೪ ॥

॥ ಸುರುಟಿ- ಏಕತಾಳ ॥

ಘನಪಂಡಿತ ನೀನು । ತಿಳಿಯದ । ತೃಣ ಸಮಾನಳಾನು ॥ ಎನಗೀ ಕಾಡೊಳು ಜನುಮವೇಕಾಯಿತು । ಋಣಬಂಧವೊ ಕರ್ಮಾನುಭವವೇನಿದು ॥ ೧ ॥ ಅಳಿದಾತ್ಮದ ಫಲದಿ । ಈ ವಿಧ । ಕೊಳಲುವರೀ ಜಗದಿ ॥ ಚೆಲುವೆ ನಿನ್ನಲಿ ಭ್ರಮೆಗೊಳಬೇಕಾದರೆ । ಕಳೆದ ಕರ್ಮಫಲ ಹಳುವದಿ ಸೇರಿತು ॥ ೨ ॥

॥ ಬಿಲಹರಿ- ಅಷ್ಟತಾಳ ॥

ವಿಹಿತ ನಿಮ್ಮಯ ಮಾತು ದೇಹಕೀ ಪಾಪ । ಸಹವಾಸದಿಂ ಬರದಿಹುದೆ ನಿರ್ಲೇಪ ॥ ಇಹ ಎರಡಾತ್ಮ ಒಂದಹುದು ಲೇಸೆಂದು । ಗ್ರಹಿಕೆಯಾಯಿತು ಆದರಿಹುದು ಇನ್ನೊಂದು ॥ ೧ ॥ ಬ್ರಹ್ಮಶ್ರೇಷ್ಠರು ನೀವೀಗೆಮ್ಮಯ ಗೃಹದಿ । ನಿರ್ಮಲವೇನಿಲ್ಲದೊಮ್ಮೆಗೀಕ್ಷಣದಿ ॥ ದುರ್ಮಾಸ ಮದಿರ ತಿಂದುಮ್ಮಳಿಸುವೆಯ । ನಿಮ್ಮ ಸಂಸಾರಕೆ ಗತಿಯೇನು ಜೀಯ ॥ ೨ ॥

॥ ಕಾಪಿ- ಅಷ್ಟತಾಳ ॥

ಋಣಕೆ ಮಾತ್ರವೆ ಆತ್ಮಬಂಧ । ಬಂಧು । ತನಯ ಪತ್ನಿಯು ಮಿತ್ರರಿದಕನುಬಂಧ ॥ ಋಣ ತೀರಿದಡೆ ಕಾಕತ್ರಯವು । ಆತ್ಮ । ವೆನುವುದೊಂದೇ ರಂಜಿಸುವುದು ಸುಸ್ಥಿರವು ॥ ೧ ॥ ನಮ್ಮೀರ್ವರಾತ್ಮವೀಗೊಂದು । ಪೂರ್ವ । ಕರ್ಮ ಫಲದೊಳೊಂದಾಗಿದೆಯಿಂದು ॥ ದುರ್ಮಾರ್ಗವೆಣ್ಣದಿರಬಲೆ । ಬೇಗೆ । ಒಮ್ಮೆ ಬಾರೆಂದಪ್ಪಿಕೊಂಡ ನಿಂದಲ್ಲೆ ॥ ೨ ॥ ಕುರುಳ ನೇವರಿಸಿ ಚುಂಬಿಸುತ । ಬುಧ । ಸ್ಮರನಾಟದಿಂದಾಕೆಯಳನು ಭೋಗಿಸುತ ॥ ಮರೆದನು ನಿಜ ಪತ್ನಿ ಸುತರ । ಆಮ । ದಿರೆಯಾಶ್ರಯದಿ ಬಾಳ್ದ ಮುಂದೆ ವಿಪ್ರವರ ॥ ೩ ॥

॥ ವಾರ್ಧಿಕ್ಯ ॥

ವಿಧಿ ನಿಯಮದಂದದಿಂ ಹೀನಂಗನೆಯಳ ಸುಖ । ಕೊದಗಿ ಬ್ರಾಹ್ಮಣ ಶ್ರೇಷ್ಠನವಳ ಜೀರ್ಣಾಲಯದಿ । ಮದಿರ ಸುರೆ ಮಾಂಸಗಳ ತಂದು ಕೊಟ್ಟುದ ನುಣುತ ಚಂಡಾಲನಂತೀರ್ದನು ॥ ಸುದತಿ ಬಾಲಕರಿತ್ತ ತಿನಲುಣಲು ದೊರಕದಿರೆ । ಸದುಕಾಯವಂ ತೊರೆದು ಪದುಮಾಕ್ಷನಂ ಸೇರೆ । ಮದಿರೆಯೊಡ ಬೆರೆದು ದಶಪುತ್ರರನು ಪಡೆದ ಬಹುವರುಷದೊಡನಾಟದಿಂದ ॥ ೧ ॥

ತನಯರಿಗೆ ಪೆಸರಿಟ್ಟ ರವಿ ಭಾನು ಕುಜರೆಂದು । ಅನಕ ಬುಧ ಸೌಮ್ಯ ಗುರು ಶುಕ್ರ ಶನಿ ಮಂದನೆಂ । ದೆನುತ ಕಡೆಯವನಿಂಗೆ ನಾರಾಯಣಾಖ್ಯೆಯಲಿ ಪ್ರೇಮದ

ಸುಪುತ್ರನಾತ ॥ ದಿನದಿನವಜಾಮಿಳಗೆ ವೃದ್ಧಾಪ್ಯ ಬಂದೊದಗಿ । ಘನರೋಗ ದಿಂದೇಳಲಾಗದುಬ್ಬಸದಿಂದ । ಮನಕರಗಿ ಮರಣ ಭಯದಿಂದ ಸತಿಸುತರ ಕರೆದಿಂತೆಂದ ಹಮ್ಮೈಯ್ದುಸ್ತ ॥ ೨ ॥

॥ ಕೇತಾರಗೌಳ- ಅಷ್ಟತಾಳ ॥

ಅರ್ಭಕರಿರ ಬನ್ನಿ ಉಬ್ಬಸ ಬರುತಿದೆ । ಕಿಬ್ಬದಿ ನೋಯುತಿದೆ ॥ ಶುಭ್ರಾಂಗಿ ಮದಿರೆ ನೀ ತಬ್ಬಿನೇವರಿಸೆಲೆ । ಎಬ್ಬಿಸಿ ಕುಳ್ಳಿರಿಸಿ ॥ ೧ ॥ ಹಸಿವೆ ತಡೆಯಲಾರೆ ತೃಷೆಯ ಸಹಿಸಲಾರೆ । ದೆಸೆ ಯಾವುದೆಂದರಿಯೆ ॥ ಉಸಿರಾಡಲಿಕೆ ಶ್ವಾಸೋಚ್ಛ್ವಾಸ ವೆಳೆಯುತಿದಂ । ದುಸುರಲೆಂದಳು ಮದಿರೆ ॥ ೨ ॥

॥ ಕೇದಾರ- ಏಕತಾಳ ॥

ಬಗುಳಬೇಡ ವಿಪ್ರರಧಮ । ಹಗಲು ರಾತ್ರಿ ನಾವು ದುಡಿದು ॥ ಸೊಗದಿ ತಂದುದುಂಡು ಈಗ । ರಗಳೆ ಮಾಳ್ಪೆ ಕರೆದು ॥ ೧ ॥ ಇಷ್ಟು ದಿವಸ ಸಾಕಿದುದಕೆ । ಕಷ್ಟ ತಡೆಯದಷ್ಟಾಗಿಹುದೆ ॥ ಎಷ್ಟಾದರು ಸ್ವಲ್ಪ ಸಹಿಸಿ । ಭ್ರಷ್ಟ ಸಾಯೋ ಮತ್ತೆ ॥ ೨ ॥ ಶ್ರಮ ಕರ್ಮಗಳು ದೇಹಕೆನುತ । ಕುಮತಿ ಬೋಧೆಯಿತ್ತೆ ಮೊದಲು ॥ ನಮಗೆ ಆತ್ಮವೊಂದೇ ಸಾಕು । ಕ್ಷಮಿಪ ಹರಿಯು ನಿನಗೆ ॥ ೩ ॥ ಮಕ್ಕಳಿಗೆ ತಂದಿಕ್ಕಿದ್ದಿಲ್ಲ । ಚೊಕ್ಕ ಮನೆ ಕಟ್ಟಿಸಿದಿಲ್ಲ ॥ ಸೊಕ್ಕಿದೆ ಎನ್ನಲ್ಲಿ ಮಣ್ಣ । ಮುಕ್ಕೆಂದು ಸಾರಿದರು ॥ ೪ ॥ ದೇವ ಕಾಪಾಡೆಂದು ವಿಪ್ರ । ನ್ಯಾವ ಕರ್ಮಫಲವೋ ಎನಗೆ ॥ ಭಾವಿಸಿ ಹೇಳುತ್ತಲೀರ್ದ । ಕಾವರೆನಗ್ಯಾರೆಂದು ॥ ೫ ॥

॥ ಸೌರಾಷ್ಟ್ರ- ತ್ರಿಪುಟತಾಳ ॥

ಪತ್ನಿ ಪುತ್ರರ ಕರೆದು ಧರಣಿ ಸು । ರೋತ್ತಮನು ನರಳುತಿರಲತ್ತಲು । ಮಿತ್ರಸಂಭವ ಯಮನು ಓಲಗ । ವಿತ್ತನಾಗ ॥ ೧ ॥ ಹರಿಹರಾದಿಗಳಾಜ್ಞೆ ಯಿಂದಲಿ । ಮೆರೆವ ಶೈಮಿನಿಗೊಡೆಯನಾಗಿಹೆ । ಅರಿತು ಜೀವರ ಶಿಕ್ಷೆ ರಕ್ಷೆಯ । ಕರುಣಿಸುವೆನು ॥ ೨ ॥ ಕೇಳಿದೆಯಲಾ ಚಿತ್ರಗುಪ್ತನೆ । ಪೇಳು ಪಾಪಾಂಧರ ಚರಿತ್ರೆಯ । ಮೂಳರನು ಶಿಕ್ಷಿಸುವುದೆನಲಾ । ವೇಳೆಯೊಳಗೆ ॥ ೩ ॥

॥ ಭಾಮಿನಿ ॥

ವೈಶ್ಯ ಕ್ಷತ್ರಿಯ ಶೂದ್ರ ವರ್ಣದ । ವಶ್ಯ ಪಾಪಿಗಳನ್ನು ಒಪ್ಪಿಸೆ । ನಿಸ್ಸಂದೇಹ ವಗೊಳದೆ ಶಿಕ್ಷೆಗೆ ಕಳುಹಿಜವನೆಂದ ॥ ಸುಸ್ವರೂಪದ ವಿಪ್ರರೊಬ್ಬರು । ಈಸ್ಸಭಾ ಸ್ಥಳದಲ್ಲಿ ಕಾಣೆನು । ದುಸ್ವಭಾವದ ವರನುತೋರೆನಲೆಂದರೊಡೆಯಂಗೆ ॥ ೧ ॥

॥ ಸೌರಾಷ್ಟ್ರ- ತ್ರಿಪುಟತಾಳ ॥

ಏನ ಪೇಳಲಿ ದೊರೆಯೆ ಶ್ರೇಷ್ಠ । ಸ್ಥಾನ ಭೂಸುರನಾದಜಾಮಿಳ । ಮಾನ ತ್ಯಜಿಸುತ ತನ್ನ ನಿಜ ಸತಿ । ಸೂನುಗಳನು ॥ ೧ ॥ ತಿನಲು ಕೊಡದವ ದಣಿಸಿ ಬಳಲಿಸಿ । ಹನನ ಗೈಸಿದನಿದಕೆ ಕಾರಣ । ಬಿನುಗೆ ಹೊಲತೆಯ ಸಂಗ ಹೊಂದುದ । ಕಿನಿತು ಗೈದ ॥ ೨ ॥ ಬುಧರ ಧರ್ಮವ ಬಿಟ್ಟು ಕೀಳರ । ಸದನದಲಿ ನೆಲೆಯಾದ ನೀಚಗೆ । ವಿಧಿವಿಧಾನಗಳೇನಯೋಗ್ಯನೆ । ಸುದಯ ತಿಳಿಸು ॥ ೩ ॥

॥ ವಾರ್ಧಿಕ್ಯ ॥

ನಿತ್ಯ ಮಾಂಸಾಹಾರ ಮದ್ಯಪಾನಾಸಕ್ತಿ । ವೆತ್ತು ದಶಪುತ್ರರಿಂದವಳೊಡನೆ ಸೊಕ್ಕಿ ವಿ । ಪ್ರೋತ್ತಮರ ಕರ್ಮಂಗಳಂ ತ್ಯಜಿಸಿ ವೃದ್ಧಾಪ್ಯದಿಂ ನರಳ್ವವೀಗಾತನು ॥ ಹತ್ತಿರಕ್ಕಾರೊದಗದಂತೀರ್ಪನಾತನಂ । ಇತ್ತ ತರಬೇಕೆ ದಂಡಿಸಿಕೊಂಡೆ ಬರಬೇಕೆ । ಬಿತ್ತರಿಸಬೇಕೆಂದು ಚಿತ್ರಗುಪ್ತನು ಪೇಳೆ ಖಾತಿಗೊಂಡೆಂದ ಯಮನು ॥ ೧ ॥

॥ ಮಾರವಿ- ಏಕತಾಳ ॥

ವಿಪ್ರನು ಚಂಡಾಲತ್ವದಿ ಬಾಳ್ದನೆ । ಕ್ಷಿಪ್ರದಿ ಬಲಗೂಡಿ ॥ ಅಪ್ಪಳಿಸುತಲೆಳೆ ತಪ್ಪುದು ದಂಡಿಸಿ । ಕುಪ್ರಸಿದ್ಧನವನ ॥ ೧ ॥ ತಡೆಯಲು ಬಂದಿಹರ್ಧಡಿಗರ ನೋಡಿಸಿ । ಕೆಡುಕನ ತಹುದೆನುತ ॥ ಕೊಡಲನುಮತಿಯನು ಪಡೆದು ಗುಪ್ತ ತ । ನ್ನೆಡ ಬಲವನು ಕರೆದ ॥ ೨ ॥

॥ ಭೈರವಿ- ಝಂಪೆತಾಳ ॥

ವಂದಿಸುತ ಚಿತ್ರ ನಿಂ । ತೆಂದ ಕರೆದಾ ಕಾರ್ಯ ॥ ದಂದವರಿಯೆನು ಮಾಳ್ಪೆ । ಸಂದೇಹವಿಡದೆ ॥ ೧ ॥ ಘೋರನೆಂದನು ಜಗದಿ । ಯಾರು ಪಾಪಿಗಳಿಹರು ॥ ಸಾರಿ ತ್ರಹ ಊಳಿಗವು । ಸಾರವಲ್ಲೆನಗೆ ॥ ೨ ॥ ಕ್ಷಯನೆಂದ ತ್ರೈಜಗವ । ಕ್ಷಯಿಸ ಬೇಕೇ ಪೇಳು ॥ ಭಯವಿಲ್ಲವೆನ್ನಲು ವಿ । ಷಯವೆಂದನಾಗ ॥ ೩ ॥

॥ ಮಾರವಿ- ಏಕತಾಳ ॥

ಕಾಲಾಳ್ಗಳೆ ನೀವಾಲಿಸಿ ಪೇಳ್ವುದ । ಭೂಲೋಕದೊಳೆಲ್ಲ ॥ ಬಾಳ್ದಿಹ ಜೀವರ ಕಾಲನಿಗಿತ್ತೆವು । ವೇಳೆಗೆ ನಾವೆಲ್ಲ ॥ ೧ ॥ ಯಮನೆದುರೊಳು ಸತ್ಕ್ರಮದಿಂ ತಿಳುಹಿಸಿ । ದಮಿತ ಪಾಪ ಪುಣ್ಯ ॥ ಸಮನಿಸಿತೆಲ್ಲರಿಗಮರ ನರಕ ಸಂ । ಯಮಿನಿಯೊಳಾವ್ ಧನ್ಯ ॥ ೨ ॥ ಕ್ಷಯನೆಂದನು ಅನ್ಯಾಯಿಗಳಿಂಗ । ಕ್ಷಯ ಶಿಕ್ಷಕ ನಾನು ॥ ದಯನಿರ್ದಯ ನಿರ್ಭಯ ಕರ್ಮಂಗಳ । ವ್ಯಯರ್ಯಾರಿಹರರುಹು ॥ ೩ ॥ ಘೋರನೆಂದ ನೀ ಮೂರು ಜಗದಿ ಎನ । ಗಾರು ಸಾಟಿಯಿಲ್ಲ ॥ ಸೇರಿತೇನು ದುರ್ಧರವದ ತಿಳುಹಿಸು । ಸಾರಿ ಮಾಳ್ಪೆವೆಲ್ಲ ॥ ೪ ॥

॥ ನಾದನಾಮಕ್ರಿಯೆ- ಅಷ್ಟತಾಳ ॥

ಗುಪ್ತನಿಂತೆಂದಜಾಮಿಳನೆಂಬ । ಬ್ರಾಹ್ಮ । ಣೋತ್ತಮ ಶೂದ್ರಾಂಗನೆಯ ತುಂಬ ॥ ಹೊತ್ತು ಆಯುಷ್ಯ ತೀರ್ದಾತನ । ತರ । ಲಿತ್ತಲೇಳಿರಿ ಪೋಪುದೀಕ್ಷಣ ॥ ೧ ॥ ಎನಲುಬ್ಬಿ ದಂಡ ಪಾಶಗಳನ್ನು । ಕೊಂಡು । ಕನಲಿ ಸಾಗುತ್ತಿರೆ ಧರೆಯನ್ನು ॥ ವನದಿ ಅಜಾಮಿಳ ಮನದೊಳು । ಧ್ಯಾನ । ವನು ಗೈದ ಹರಿಯ ಸದ್ಧೃಢದೊಳು ॥ ೨ ॥

Scanned by CamScanner

॥ ಮತ್ತೇಭವಿಕ್ರೀಡಿತಂ ॥

ಹರಿಶ್ರೀ ಪಂಕಜನೇತ್ರ ವಿಷ್ಣು ಧ್ರುವಗಂ ಸ್ಥಿರಸ್ಥಾನವಿತ್ತಂದಡಿ । ಮರೆದಾಂ ಮಾಡಿದ ಪಾಪಕರ್ಮವಿರಲುಂ ಕ್ಷಮಿಸೆನ್ನನುಂ ರಕ್ಷಿಸೌ ॥ ಧರೆಯೊಳ್ಬಂಧು ಕಳತ್ರ ಮಿತ್ರ ಸುತರೆಂಬವರ್ಯಾರನುಂ ಕಾಣೆ ನಾಂ । ಶರಣೆಂದೆಂಬೆನು ದೇವ ನೀನೆ ಕರೆದೊಯ್ಯೆನಗೀಯೊ ಕೈವಲ್ಯಮಂ ॥ ೧ ॥

॥ ಶಾರ್ದೂಲವಿಕ್ರೀಡಿತಂ ॥

ಮಾಯಾ ಮೋಹದಿ ಪತ್ನಿ ಪುತ್ರರುಗಳಂ ತಾಂ ಹತ್ತಿರಕ್ಕೈದಿಸಿ । ಜಾಯಾದ್ಯಾದಿಗಳ್ಕೇಳಿರೆನ್ನ ಮರಣಂ ದೂರಿಲ್ಲದಾ ಕಾರಣಂ ॥ ಬಾಯಾರಿರ್ಪೆನು ನೀರನಿತ್ತು ತೃಷೆಯಂ ನೀಗುತ್ತ ಮತ್ತೆಬ್ಬಿಸಿ । ಆಯಾಸಕ್ಕೆಡೆ ಮಾಡಬೇಡಿರೆನುತಂ ಬಾಯ್ಬಿಟ್ಟು ಕೂಗಾಡಿದಂ ॥ ೧ ॥

॥ ತೋಡಿ- ಆದಿತಾಳ ॥

ಶ್ವಾಸವು ಕಟ್ಟುತಲಿಹುದು । ನಿಜ । ದಾ ಸತಿ ಸುತರಳಿದಿಹುದು ॥ ಲೇಶ ನೀವಾದ್ರುಪಚರಿಸಿ । ಉಂ । ಬಾಶೆಗೆ ತಿನಿಸನು ಕೊಡಿಸಿ ॥ ೧ ॥ ಎನ್ನ ದಣಿಸೆ ನೀವ್ ಮುಂದೆ । ಇದ । ರನ್ನನುಭವಿಪಿರಾನೆಂಬೆ ॥ ಕಣ್ಣೊಳಗಿಲ್ಲವೆ ರಕ್ತ । ಮಾ । ತಿನ್ನಾಡಲಿಕೆ ಅಶಕ್ತ ॥ ೨ ॥

॥ ವಾರ್ಧಿಕ್ಯ ॥

ಮದಿರೆ ಕೇಳ್ದೆಂದಳದಕಧಮ ಭವಿಸಿದ ಕರ್ಮ । ಕದಕೆಮ್ಮ ನೀನ್ಯಾಕೆ ಹಳಿವೆ ನಾವೇನ್ ಬಾಧ್ಯ । ರಿದಕಲ್ಲ ನರಳಿ ಸಾಯೆಂದರುಹಿ ಬೈವುತ್ತ ತರಳರೊಡನಿಂತೆಂದಳು ॥ ಸದನಕೆಳ್ಳಷ್ಟು ತಾರದೆ ತಿಂದು ಸೊಕ್ಕಿ ನಿಜ । ಸುದತಿ ಪುತ್ರರ ನೋಡದಳಿಸಿದಾ ಪಾಪಿಯಿವ । ಗೊದಗದಿರಿ ನೀವತ್ತ ತೆರಳಿರೆನುತೆಲ್ಲರುಂ ಸರಿಯಲೊಂದೊಂದು ದೆಸೆಗೆ ॥ ೧ ॥

॥ ಭಾಮಿನಿ ॥

ವೃದ್ಧನೇಳದೆ ರೋಗ ಯಾತನೆ । ಮೀರ್ದುವಿಪ್ರನು ಊರ್ಧ್ವ ಶ್ವಾಸದೊ । ಳಿರ್ದು ಕರೆದರು ಬಾರದೋರ್ವರು ಯಿದ್ದ ಸಮಯದಲಿ ॥ ಎದ್ದು ಬಂದಿಹ ಕಾಲನಾಳ್ಗಳು । ಕ್ಷುದ್ರ ಪಾಶವನಿಕ್ಕಿ ಜೀವಕೆ । ಒದ್ದು ಶಿಕ್ಷಿಸಲಾಗ ಸ್ಮರಪಿತಗೆಂದ ತನ್ನೊಳಗೆ ॥ ೧ ॥

॥ ಸಾವೇರಿ- ಅಷ್ಟತಾಳ ॥

ಈ ಪರಿಯಲಿ ಮಹ । ಪಾಪಿಯೊಬ್ಬನ ಬಿಟ್ಟು । ನೀ ಪರಿಕಿಪೆಯೆನ್ನ ಕಾಪಾಡೆಯ ॥ ಮಾಪತಿ ಗೋಪತಿ ಶ್ರೀಪತಿ ನೀಗತಿ । ಕಾಪಿಟ್ಟು ಸಲಹೊ ಚಿದ್ರೂಪ ದೇವರದೇವ ॥ ೧ ॥ ಸರ್ವರಕ್ಷಕ ನೀನು ಸರ್ವಾಂತರ್ಯಾಮಿಯು । ಶರ್ವನ ಮಿತ್ರ

ಶ್ರೀಪರಮಾತ್ಮ ॥ ಸರ್ವೇಶ ಗರ್ವಿತಶರ್ವೀಶನೂರ್ವಿಶ । ಬರ್ವೆ ಯಾವಾಗ ಕಾದಿರ್ವೆ ದಾಮೋದರ ॥ ೨ ॥

॥ ಪೀಲು- ಅಷ್ಟತಾಳ ॥

ಬಾರಿತ್ತ ಕಿರಿ ಸುಕುಮಾರ ಉದಾರ । ನಾರ ನಾರ ನಾರಾಯಣ ಕುಲೋದ್ಧಾರ ॥ ಕ್ರೂರರೊಯ್ವರು ಮೋರೆ ತೋರೋ ಸುಧೀರ । ದೂರ ಪೋಪೆಯ ನಾನು ಸೇರ್ವೆಮನೂರ ॥ ೧ ॥ ನಾರನಾರಾಯ ನಾರಾಯಣಾ ಯೆಂದು । ದೂರ ದೂರಾಗಿ ಬಾಯಾರಿ ಪೇಳ್ದಂದು ॥ ಕಾರುಣ್ಯಾಂಬುಧಿ ದಯದೋರೆಯ ಬಂದು । ನಾರಾಯಣ ನಾರಾಯಣನೆಂದ ನೊಂದು ॥ ೨ ॥

॥ ಕಂದ ॥

ಕಿರಿಯಣುಗನ ಕರೆಕರೆವುತ । ಹರಿ ನಾಮವಾಗಲರಿಯದ ಕಾಲನ ದೂತರ್ ॥ ಕೊರಳಿಂಗಿಕ್ಕಿದ ಪಾಶದಿ । ಪರಿ ಪರಿ ದಂಡಿಸುತಲೀರ್ದರಾತನ ಸೆಳೆದುಂ ॥ ೧ ॥

॥ ಮಧ್ಯಮಾವತಿ- ತ್ರಿಪುಟತಾಳ ॥

ಆದಿಮಾಯಾಜ್ಞೆಯಲಿ ವಿಷ್ಣುವು । ಸಾಧಿಸುತ ಸ್ಥಿತಿ ಕಾರ್ಯದಿಂದಲಿ ॥ ಶೋಧಿಸುತ ದುರ್ಜನರ ತೀರಿಸಿ । ಸಾಧುಸಂತರ ಸಲಹುತ । ಇರುವ ಕಾಲ ॥ ೧ ॥ ಆರ್ತನಾದವು ಕೇಳೆ ಕರ್ಣಕೆ । ಚಿತ್ತದಲಿ ತಳಮಳವು ಹೆಚ್ಚಲು ॥ ಭಕ್ತನನು ದಂಡಿಸುವರ್ಯಾರೀ । ಪೃಥ್ವಿಯೊಳಗೆಂದರಿತನು । ಜ್ಞಾನದಿಂದ ॥ ೨ ॥ ಧೂರ್ತ ಕಾಲನ ಭಟರಜಾಮಿಳ । ನಾತ್ಮವನು ದಂಡಿಪರು ಪೊರೆವೆನೆ ॥ ನುತ್ತ ಪಡಿಯವರುಗಳ ಕರೆಯಲು । ನಿತ್ತು ವಂದಿಸುತೆಂದರು । ನಮಿಸಿ ಹರಿಗೆ ॥ ೩ ॥

॥ ಭೈರವಿ- ಏಕತಾಳ ॥

ಚಿನುಮಯ ನಿನ್ನನುವಿಂದ । ಬಂ । ದೆನುವನು ನಾನೇ ನಂದ ॥ ಮನಕರಿಯೆನು ಸಂಗತಿಯ । ಮಾ । ಳ್ಪೆನು ಪೇಳಿನ್ನಾ ಬಗೆಯ ॥ ೧ ॥ ಘಮ್ಮನೆ ಪೇಳ್ದ ಸುನಂದ । ಪರ । ಬೊಮ್ಮನೆ ಭಯವೇನೆಂದ ॥ ಹಮ್ಮಿದ ಕಾರ್ಯವ ತಿಳುಹು । ಜಯ । ವಮ್ಮಾಳ್ಪೆನು ದಿಟವರುಹು ॥ ೨ ॥ ನಿನಗೆ ವಿರೋಧಿಗಳಿಹರೆ । ಜಗ । ಮುನಿದೆಮ್ಮಲಿ ನಡೆತಹರೆ ॥ ಅನಿಮಿಷ ವಿಧಿ ಮೃಡ ತಂಡ । ವಂ । ದನೆ ಮಾಳ್ಪರೆಂದ ಚಂಡ ॥ ೩ ॥ ಮಣೆದುಸುರಿದನು ಪ್ರಚಂಡ । ರಣ । ಕಣಕೆ ನಿಲುವವರು ದಂಡ ॥ ನಿನಗೇನೊದಗಿತು ತೊಡರು । ಎಂ । ದೆನೆ ಪೇಳಿದ ದೂತರೊಳು ॥ ೪ ॥

॥ ಕೇತಾರಗೌಳ- ಝಂಪೆತಾಳ ॥

ಕೇಳಿ ಮಮ ಪಾರ್ಶ್ವದವರು । ಗುಣನಿಧಿ ಸು । ಶೀಲ ನಿಗಮಾಗಮದೊಳು ॥ ಮೇಲಾದಜಾಮಿಳನನು । ಯಮಭಟರು । ಗೋಳುಗುಡಿಸುವರವನನು ॥ ೧ ॥

Scanned by CamScanner

ತಿಳಿಸಿ ಮಮ ಭಕ್ತನೆಂದು । ಕೇಳದಿರೆ । ಸೆಳೆದಿಲ್ಲಿ ತನ್ನಿರಿಂದು ॥ ಗೆಲಬಹುದೆ ಯಮನ ಭಟರ । ಎನಲೆಲ್ಲ । ಮುಳಿದೆಂದರಾಗ ವಿವರ ॥ ೨ ॥

॥ ಭೈರವಿ- ಅಷ್ಟತಾಳ ॥

ಹರಿಯೆ ಕಾಲನ ಭೃತ್ಯರು । ನಿನ್ನಯ ಭಕ್ತ । ನಿರಲರಿತಿಂದವರು ॥ ಪರಿಪರಿಯಿಂದ ಶಿಕ್ಷಿಪರೆ ಯೋಚಿಸದಿರು । ತರುವೆವವನ ನೋಡಿರು ॥ ೧ ॥ ಈಶನಾಜ್ಞೆಯು ಎನಗೆ । ಎನ್ನುತಲಿ ಕೀ । ನಾಶನು ದೂತರಿಗೆ ॥ ರೋಷದಿ ದಂಡಿಸಿ ಘಾಸಿ ಮಾಡಲು ಪೇಳ್ದ । ಲೇಸಾಯ್ತು ಬಿಡೆನವರ್ಗೆ ॥ ೨ ॥ ಹಿಂದೆ ಹರನ ಭಕ್ತರ । ಕೆಣಕಿ ಕಾಲ । ನೊಂದಿಹ ಮರೆತದರ ॥ ಇಂದೆಮ್ಮ ಶರಣಾರ್ಥಿಯಿಂದ ನೆನಪಿಸುವೆ । ಸಂದೇಹ ಬಿಡು ಶ್ರೀವರ ॥ ೩ ॥ ಯಮಭಟರೊಡನಂತಕ । ಬರಲಿ ಉಮಾ । ರಮಣನು ಸೋಲ್ವನಕ ॥ ಸಮರವೆಸಗಿ ಅಜಾಮಿಳನನು ತಹೆ ನೋಡು । ಕ್ರಮದಿ ಚಿನುಮಯಾತ್ಮಕ ॥ ೪ ॥

॥ ಕಂದ ॥

ಧೈರ್ಯದ ವಾಣಿಯನಾಲಿಸಿ । ಸ್ಥೈರ್ಯಗೆಡದೆ ಯಮನ ದೂತರಂ ತೊಲಗಿಸುತಂ ॥ ಕ್ರೌರ್ಯವ ತೋರದೆ ಶರಣಗೌ । ದಾರ್ಯದಿ ತನ್ನಿರಿ ಯೆನುತ್ತ ಕಳುಹಿದನಾಗಂ ॥ ೧ ॥

॥ ಕಾಂಬೋದಿ- ಝಂಪೆತಾಳ ॥

ನಾನಾರ ನಾರಾಯ ನಾರಾಯಣಾ ಎನುವ । ಕ್ಷೋಣಿಯಮರ ನನೆಮನ ಭಟರು ॥ ತ್ರಾಣದಿಂ ಹಿಂಸಿಪುದ ಕಾಣುತಲಿ ಹರಿ ಚರರು । ತಾನೆ ಬಿಡಿಸುತ್ತೆಂದರಾಗ ॥ ೧ ॥

॥ ಶಂಕರಾಭರಣ- ಏಕತಾಳ ॥

ನಂದ:

ಹರಿಯ ಭೃತ್ಯರಾವು ವಿಪ್ರ । ವರನನೆಳೆದು ದಂಡಿಸುವಿರೆ ॥ ಶರಣನೆಮಗಿಂದಿವನ ಬಿಟ್ಟು । ತೆರಳಿಲೂರಿಗೆ ॥ ೧ ॥

ಚಿತ್ರ:

ಚಿತ್ರನೆಂದ ಕಾಲನಾಜ್ಞೆ । ವೆತ್ತು ಬಂದೆವ್ ಪಾಪಿ ಈತ ॥ ಗೊತ್ತಿ ದಣಿಸಿ ಒಯ್ವುದೆಮ್ಮ । ಕರ್ತವ್ಯವಿದು ॥ ೨ ॥

ಸುನಂದ:

ಧರ್ಮಕರ್ಮ ಶ್ರೇಷ್ಠನಿಂಗೆ । ಸಮ್ಮತ ವೈಕುಂಠ ಪದವಿ ॥ ನಿರ್ಮಲಾತ್ಮ ಗೊಯ್ವೆ ನಾವಿಂ । ದೆಮ್ಮ ಲೋಕಕೆ ॥ ೩ ॥

ಗುಪ್ತ:

ಗುಪ್ತನೆಂದ ಬುಧರ ಧರ್ಮ । ವೃತ್ತಿ ಬಿಟ್ಟು ಹೊಲೆಯನಾದ ॥ ಪತ್ನಿ ಸುತರನಳಿಸಿದಾತ । ಯುಕ್ತ ಪಾಪಿಯು ॥ ೪ ॥

ಚಂಡ:

ಆತ್ಮತೃಪ್ತಿಯಿಂದ ಹರಿಯ । ಸ್ತುತ್ಯನಾದನೀತನನ್ನು ॥ ಧೂರ್ತ ಯಮನಿಗೀವರಲ್ಲ । ಅತ್ತ ತೊಲಗೆಲ ॥ ೫ ॥

॥ ಮಾರವಿ- ಏಕತಾಳ ॥

ಕ್ಷಯ:

ಕ್ಷಯನೆಂದನು ಅಕ್ಷಯ ಪಾತಕದಾ । ಶ್ರಯಕೀ ಬುಧರಧಮ ॥ ನಿಯಮದಂತೆ ನಮ್ಮಯ ಲೋಕಕ್ಕೆಸೆ । ಳೆಯುವೆನು ಬಿಡೆನಿವನ ॥ ೧ ॥

ಚಂಡ:

ಕೀನಾಶನ ಪಿತ ಭಾನು ಜಗತಿಯಲಿ । ಪುಣ್ಯ ಪಾಪ ಬಿಡದೆ ॥ ತಾನೆ ಪ್ರಕಾಶಿಸನೇ ನಿಧಾನದೊಳು । ನೀನೆಡರಾಡುವುದೆ ॥ ೨ ॥

॥ ಶಂಕರಾಭರಣ- ಮಠ್ಯತಾಳ ॥

ಘೋರ:

ಘೋರನೆಂದನಿರುಳು ಹಗಲು ಮಾರುತಾದ್ಯರು । ಸೂರ್ಯ ವರುಣ ಕಾಲಚಕ್ರ ದೋರಿ ನಡೆವರು ॥ ಸೇರಿಹೆವದರೊಳಗೆ ನಾವೀ ಕ್ರೂರ ಪಾಪಿಯ । ಭಾರಿ ದಂಡಿಸುವೆವು ಕೇಳ್ವನ್ಯಾರು ನೀತಿಯ ॥ ೧ ॥

ಪ್ರಚಂಡ:

ಕಾಲಚಕ್ರದಾದಿ ಮೂರ್ತಿಶ್ರೀಲಲಾಮನು । ಕೇಳ್ದರಿಯೆಯರೆಲ್ಲರಾತ್ಮವಾಳ್ವ ದೇವನು ॥ ಪಾಲನಾಕರ್ತ ವಿಷ್ಣುವಲ್ಲಿಗೀತನ । ತೋಳ ಬಲದೊಳೊಯ್ವೆ ಬಿಡೆ ಸುಶೀಲ ಭಕ್ತನ ॥ ೨ ॥ ಮುತ್ತಿ ಯಮನ ಭೃತ್ಯರೆಳೆಯಲತ್ತ ಹರಿ ಚರ । ರಿತ್ತ ಸೆಳೆಯೆ ಹತ್ತಿತವರೊಳ್ ಮತ್ತೆ ಸಂಗರ ॥ ಮಿತ್ರ ಸುತನ ಆಪ್ತರನ್ನು ಸತ್ವಗುಂದಿಸಿ । ಪೃಥ್ವಿಗೊರಗಿಸುತ್ತ ಮೆರೆಯೆ ಕೀರ್ತಿ ರಂಜಿಸಿ ॥ ೩ ॥

॥ ಭಾಮಿನಿ ॥

ಈ ತೆರದಿ ರಣದಲಿ ರಮೇಶನ । ದೂತರೆಲ್ಲರು ಕಾಲನಾಳ್ಗಳ । ಖ್ಯಾತಿಯಲಿ ಜೈಸುತ್ತಜಾಮಿಳನನ್ನು ಪಿಡಿದೆತ್ತಿ ॥ ಮಾತನಾಡಿಸಿ ತಳ್ಕಿಸುತ ಶ್ರೀ । ನಾಥನಿದ್ದೆಡೆ ಗೊಪ್ಪಿಸಿದದಾ । ಪ್ರೀತಿಯಲಿ ಮುಂಡಾಡಿ ವಿಪ್ರನೊಳೆಂದ ನಸುನಗುತ ॥ ೧ ॥

Scanned by CamScanner

॥ ಮೋಹನ- ತ್ರಿಪುಟತಾಳ ॥

ಭೂಮಿಯೊಳ್ ಶ್ರೇಷ್ಠನಜಾಮಿಳ ನೀನು । ಕಾಮಿನಿ ಸುತರಿಂದ್ರಧಾಮ ಕಟ್ಟಿಹನು ॥ ಆ ಮಾರಿ ಹೊಲತಿಯ ಪ್ರೇಮಕೆ ಸಿಲುಕಿ । ನೀ ಮಡಿದೆಯ ಸರ್ವ ವ್ಯಾಮೋಹ ತ್ಯಜಿಸಿ ॥ ೧ ॥ ಆತ್ಮಕೆನ್ನಯ ನಾಮವಾಯ್ತು ಸಂತೃಪ್ತಿ । ದೂತರ ಕಳುಹಿ ತಂದಾಯ್ತಿನ್ನು ಮುಕ್ತಿ ॥ ಭೂತಳ ಸೇರ್ವ ಮುಂದಾತುರ ಬೇಡ । ಖ್ಯಾತಿಯಿಂದಿಹುದಿಲ್ಲ ನಿತ್ಯ ಸಗಾಥ ॥ ೨ ॥

॥ ಕಂದ ॥

ಕರುಣಪೆ ಸಾಯುಜ್ಯವನೆಂ । ದರುಹುತ ನಿಜ ಪತ್ನಿ ಸುತರನೆಲ್ಲರ ತನ್ನೊಳ್ ॥ ಯಿರಿಸುತ ಹರಿ ಮೆರೆದಿರಲುಂ । ಕೊರಗುತ್ತೆಮನಾಳ್ಗಳಾಗ ಜವಗಿಂತೆಂದರ್ ॥ ೧ ॥

॥ ಮಧ್ಯಮಾವತಿ- ಏಕತಾಳ ॥

ಕೇಳಯ್ಯ ಯಮದೇವ ಪೇಳುತ ಮಾತ । ಕೀಳರಲ್ಲಿರ್ದನಜಾಮಿಳ ಖ್ಯಾತ ॥ ತೋಳ ಬಲ್ಪಿಂದ ನಮ್ಮಾ ಲೋಕಕೆಳೆಯೆ । ಮೇಲೆ ದಂಡಿಸೆ ಹರಿ ಪಾಲಿಸೆಂ ದೊರೆಯೆ ॥ ೧ ॥ ಆ ಕ್ಷಣದೊಳಗೆ ಫುಲ್ಲಾಕ್ಷನ ಭಟರು । ಶಿಕ್ಷಿಸಿ ನಮ್ಮನು ಲಕ್ಷಿಸದವರು ॥ ಆ ಕ್ಷಿತಿಯಮರನ ಲಕ್ಷ್ಮೀಶನೆಡೆಗೆ । ತಕ್ಷಣ ಒಯ್ದುರಿಂದಾಶ್ಚರ್ಯವೆಮಗೆ ॥ ೨ ॥ ಪಾಶದಂಡವು ಬೇಡ ದೇಶಾವರದಲ್ಲಿ । ತೋಷದಿ ಬಾಳ್ವೆವೆಂದಾ ಸಮಯದಲಿ ॥ ಬೇಸರಿಸದಿರಿ ಲಕ್ಷ್ಮೀಶನ ಕಂಡು । ಲೇಸಾದ ಪಥ ಕಾಂಬೆ ನೀವ್ಪೋಗಿರೆಂದು ॥ ೨ ॥

॥ ಭಾಮಿನಿ ॥

ಯೋಚಿಸಿದ ವಿಧಿ ಮೃಡರಿಗೊರೆದರೆ । ಯಾಚನೆಗೆ ಫಲ ಲೇಸುದೋರದು । ಆ ಚಿದಾತ್ಮನ ಬಳಿಗೆ ತೆರಳುತ ಕೇಳ್ವೆನೆನುತಾಗ ॥ ನಾಚುತಲಿ ಪೊರಮಟ್ಟು ಬಂದವ । ನಾ ಚರಾಚರಭರಿತನಡಿಯಲಿ । ವಾಚಿಸಿದ ತನ್ನಿರವ ನುತಿಸುತ ಹಲವು ವಿಧದಿಂದ ॥ ೧ ॥

॥ ಕಾಂಬೋಧಿ- ತ್ರಿಪುಟತಾಳ ॥

ಸಚ್ಚಿದಾನಂದ ಮೂರ್ತಿ । ಪಂಕಜನಾಭ । ಅಚ್ಯುತ ನಿನ್ನ ಕೀರ್ತಿ । ಶರಣರ ಮನ । ದಿಚ್ಛೆಯನ್ನಳಿವ ಶಕ್ತಿ । ತಳೆದಿಹ ಯುಕ್ತಿ ॥ ಎಚ್ಚರಿಕೆಯಲಿ ಸ್ವಚ್ಛವರಿತೆನು । ತುಚ್ಛವಿಪ್ರನ ಶಿಕ್ಷಿಸಲು ಮಮ । ಇಚ್ಛೆಪಾಲರ ದುಶ್ಚಟರೊ ನಿ । ನ್ನುಚ್ಚ ದೂತರು ಹುಚ್ಚರಂದದಿ ॥ ೧ ॥ ಎನ್ನಯ ಪಡಿಯವರ । ಯುದ್ಧವ ಮಾಡಿ । ಬನ್ನ ಬಡಿಸುತೆಲ್ಲರ । ಪಾತಕಿ ವಿಪ್ರ । ನನ್ನೊಯ್ದಿರುವ ವಿವರ । ನಾ ತಿಳಿದೆ ಶ್ರೀಧರ ॥ ನಿರ್ಣಯಾತ್ಮಕ ನಿನ್ನ ನೇಮಗ । ಳನ್ನು ನಡೆಸಲು ವಿಘ್ನತರುವುದು । ಚಿನ್ಮಯನೆ ಸೊಗಸೆನ್ನಿಪುದೆ ಸಾ । ಕಿನ್ನು ಚಾಕರಿ ಎನ್ನಲೆಂದನು ॥ ೨ ॥

॥ ವಾರ್ಧಿಕ್ಯ ॥

ಬುಧನಾಗಿ ವಿಪ್ರ ಧರ್ಮದೊಳಿರ್ದನಿವ ಬಳಿಕ । ಮದಿರೆಯಂ ಬೆರೆದು ಶೂದ್ರತ್ವವಂ ಬಿಡದಿರುವ । ತುದಿಗೆ ಮರಣಾಂತ್ಯಕೆನ್ನನು ನುತಿಸುತಿದ್ದವನು ಕೆದರಿ ನೀವ್ ಶಿಕ್ಷಿಸಿದುದು ॥ ಅಧಿಕ ತಪ್ಪಾಯ್ತು ಮುಂದೆನ್ನಾತ್ಮ ಶುದ್ಧದಿಂ । ಪದವ ಸ್ತುತಿಪರಿಗೆ ಬಾಧಿಸದೆ ನಡೆ ಎಂದೆನುತ । ಪದುಳದಿಂ ಸಂತೈಸಿ ಕಳುಹಲ್ಕಜಾಮಿಳನ ಚರಿತೆ ಹೆಚ್ಚಿತು ಲೋಕದಿ ॥ ೧ ॥

॥ ಕಂದ ॥

ಸುರ ದುಂದುಭಿ ಮೊಳಗುತಿರಲ್ । ಹರಿಯಂ ಮೌನಿಗಳು ಸ್ತೋತ್ರ ಮಾಡುತ್ತಿರಲುಂ ॥ ಸಿರಿ ಧರೆಯವರೊಂದಾಗುತ । ಸುರುಚಿರದಾರತಿಯ ತಂದು ಬೆಳಗಿದರಾಗಳ್ ॥ ೧ ॥

॥ ಧವಳಾರ ॥

ಫಲ ಕುಸುಮಾಕ್ಷತೆ ಕದಳಿಗಳ । ತಿಳಿ ಗಂಗೋದಕ ಕಲಶಗಳ ॥ ಬಲು ಬೆಡಗಿಲಿ ಕನಕದ ಹರಿವಾಣದಿ । ಸಲೆ ಕರ್ಪೂರ ವೀಳಯವನ್ನೀಡುತ । ಸುಲಲಿತ ದಾರತಿಯಾ ಬೆಳಗಿದರು ॥ ಶೋಭಾನಂ ॥ ೧ ॥

॥ ಮೋಹನ- ಏಕತಾಳ ॥

ಪಂಕಜಾಕ್ಷ ಶ್ರೀರಮಣನಿಗೆ । ವೆಂಕಟೇಶ ಪದ್ಮಾವತಿಗೆ ॥ ಸಂಕಟಹರಣಗೆ ಶಂಕರ ಸಖನಿಗೆ । ಕುಂಕುಮನಾಮ ಗದಾಂಕಿತಗೆ । ಮಂಗಲಂ ಜಯ ಮಂಗಲಂ ॥ ೧ ॥ ಗರುಡಗಮನ ನಾರಾಯಣಗೆ । ಸುರಮುನಿ ವಂದಿತ ಕೇಶವಗೆ । ಧರೆಯೊಲ್ಲಭ ಕಣಪುರದ ಶ್ರೀಕೃಷ್ಣಗೆ । ಸುರವಂದಿತ ಮಂದರಧರಗೆ । ಮಂಗಲಂ ಶುಭ ಮಂಗಲಂ ॥ ೨ ॥ ಶೇಷಶಯನ ಲಕ್ಷ್ಮೀಶನಿಗೆ । ದ್ವೇಷಿಗರತುಳ ವಿನಾಶಕಗೆ ॥ ತೋಷದ ಭಕ್ತವಿಲಾಸಿಗೆ ತವ ಪದ । ದಾಸರ ನಿತ್ಯವು ಪೋಷಿಪಗೆ ॥ ಮಂಗಲಂ ಜಯ ಮಂಗಲಂ ॥ ೩ ॥

॥ ವಾರ್ಧಿಕ್ಯ ॥

ವರ ಮಹಾ ಭಾಗವತ ಚರಿತಾಮೃತದೊಳಿರ್ದ । ಧರೆಯಮರಜಾಮಿಳನ ಕಥೆ ಯಕ್ಷಗಾನದಲಿ । ಬರೆದಿರ್ಪ ಬಲಿಪ ನಾರಾಯಣಂ ಭಾಗವತ ಜನ ಚರಣ ಶರಣಾಗ್ರಣಿ ॥ ಇರಲು ತಪ್ಪೊಪ್ಪುಗಳ ತಿದ್ದಿ ವಾಚಿಸಿ ಪೇಳಿ । ನಿರತ ಕೇಳರಿಗೆ ಸಂಪತ್ತು ದೇಹಾರೋಗ್ಯ । ಕರುಣಿಸಲಿ ಕಣ್ವ ಪುರದೆರೆಯ ರಾಧಾರಮಣನೆಂದು ನಾಂ ಪ್ರಾರ್ಥಿಸುವೆನು ॥ ೧ ॥

ಒಟ್ಟು ಪದಸಂಖ್ಯೆ ೧೫೪

॥ ಮಂಗಲಮ್ ॥

* * * *

Scanned by CamScanner